Reg. No. M. 1550

13—3—1936

KODAGU

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಮೆಚ್ಚಿನ ಮುದ್ರಣ ಕಲಸಕ್ಕೆ "ಕೊಡಗು" ಪ್ರೆಸ್ಸು, ಮಡಿಕೇರಿ.

ಹೆಚ್ಚಿನ ವಿಷಯಕ್ಕೆ ಕೂಡಲೆ ವಿಚಾರಿಸಿರಿ.

ಕ್ಷೀರಂ ಭಾಷತದಯಯೆಸಾ ವಿದ್ಯಾ ನೀತಿ ಪ್ರಯಷ್ಟ ಕಾಃ॥ ಐಕ್ಯಮುಕ್ಕೇಸ ಜೇಶಾಣಾಂ ಸೆಸಿ ರಾ ರಾಜ್ಯ ಸಂಪದಾ

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಸಂಧ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೧೩—೩—೧೯೩೬ [ಸಂಚಿಕೆ ೩೮

Telephon; 3145

By Appointment To H. E The Governor of Madras.

Telegrams: 'PRECIOUS.'



Brooch

Ring.

Ring.

Necklace.

V. SUBRAMANIA IYER.

Jeweller, & Diamond Merchant,

52—16 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.

Catalogue & special designs with quotations (free) on enquiry

BANKING FACILITIES OF EVERY DESCRIPTION.

Head office:—UDIPI

BRANCHES:—

1. Madras,
2. Coondapoor.
3. Car Street, Mangalore
4. Bunder, Mangalore.
5. Shimoga
6. Udipi
7. Mercara.
8. Virarajendrapet

Security.

The financial strength and integrity of this Bank is shown by the growth of the RESERVES from a modest sum of Rs. 83000 in 1927 to its present position with Rs. 3 64,644.

BANKERS AT—

1. Bombay.
2. Calcutta.
3. Karachi.
4. Bangalore.
5. Mysore.
6. Calicut.
7. Cannanore.
8. Cochin, and other important places.

To those thinking of investments the following figures should strongly appeal.

Capital: Anthorised, issued and subscribed—Rs. 3,50,000.

Paid up Rs. 2,80,750.

Deposits—Rs. 27,99 323. Working Capital—Rs. 35,66,707.

Fixed Deposits now received upto 5%.

The Canara Banking Corporation Udipi Limited.

52—17 Estd. 1906.

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

ಜೀವನವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.

ಬೊನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%0
ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%0
ಪಾಲಿಸಿಯ ಶರತ್ತುಗಳು ಅತೀ ಸುಲಭ
ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ವಂಶಪಾರಂಪರ್ಯ ಕಮಿಶನ್ ದೊರೆಯುವಂತಿದೆ.
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಪಿ. ಡಿ. ಭಾಗವ, ಎಫ್. ಎಸ್. ಎಸ್. (ಲಂಡನ್).
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—
ಎ. ಎಸ್ ಎಸ್ ಅಯ್ಯಂಗಾರ್.
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರೋಡು.
52—40 ಬೆಂಗಳೂರು

ವಿವಿಧ ವಾರ್ತಾವಳಿ.

ಅತೀ ಕುಳ್ಳ ವ್ಯಕ್ತಿ.

ದಕ್ಷಿಣ ಆಫ್ರಿಕದ ಜೂಲು ಕುಳ್ಳನೊಬ್ಬನು ಕೇವಲ 20 ಅಂಗುಲ ಎತ್ತರ ಇದ್ದಾನೆ. ಅವನ ಹೆಸರು ಸೆಂಪಾಯರ್ ಎಂದು. ಅವನ ವಯಸ್ಸು 14 ವರುಷ, ಪ್ರಪಂಚದಲ್ಲಿ ಇವನಷ್ಟು ಕುಳ್ಳನು ಮತ್ತೊಬ್ಬನಿಲ್ಲ. ಮುಕ್ಕಾಲು ಗಜ ಅರಿವೆ ಇದ್ದರೆ ಇವನಿಗೆ ಒಂದು ಇಜಾರನ್ನು ಅಂಗಿಯನ್ನೂ ಹೊಲಿಸಬಹುದು, ಕಳೆದ ನಾಲ್ಕು ವರ್ಷಗಳಿಂದ ಇವನು ಒಂದಂಗುಲವೂ ಬೆಳೆದುದಿಲ್ಲ.

—೦೦೦—

ಇಪ್ಪತ್ತು ರೂಪಾಯಿಗೆ ಹೊಲಿಗೆಯ ಮೆಶೀನು!

ಫೆರೋಜಪುರ (ಪಂಜಾಬ ಪ್ರಾಂತ್ಯದ) ಸರಕಾರಿ ಔದ್ಯೋಗಿಕ ಶಾಲೆಯವರು, ಗ್ರಾಮಫೋನ್, ಗಡಿಯಾರ, ಹೊಲಿಗೆಯ ಮೆಶೀನು ಸೈಕಲು ಮೊದಲಾದುವುಗಳನ್ನು ತಯಾರಿಸಿ, ವಿಕ್ರಯಕ್ಕಿರಿಸುವ ನಿರ್ಧಾರವನ್ನೂಡಿದುವರು.

ಈ ಸಾಮಾನುಗಳೆಲ್ಲ ಆಶ್ಚರ್ಯಕರವಾದ ಅಗ್ಗ ದರಗಳಲ್ಲಿ ಮಾರಾಟ ಮಾಡಲ್ಪಡುವುವು. ಒಂದು ಹೊಲಿಗೆಯ ಮೆಶೀನು ಇಪ್ಪತ್ತು ರೂಪಾಯಿಗಳಿಗೆ ದೊರೆವಂತೆ ಇದೆ.

—೦೦೦—

ಬ್ರಿಟನಿನ ಸಂಗ್ರಾಮ ಸಿದ್ಧತೆಗಳು.

ಸಂಗ್ರಾಮ ಸಿದ್ಧತೆ ಮತ್ತು ಬ್ರಿಟನಿನ ರಕ್ಷಣಾ ಯೋಜನೆಯು, ಬ್ರಿಟಿಷ್ ಪಾರ್ಲಿಮೆಂಟಿನ ಒಂದು ಪ್ರಾಮುಖ್ಯ ಪ್ರಶ್ನೆಯು ದಾರಾಳ ಹಣವನ್ನು ಸಂಗ್ರಾಮ ಸಿದ್ಧತೆಗಾಗಿ ವಿಂಗಡಿಸಲಾಗಿದೆ. ಈ ಕಾರ್ಯಗಳು ಸರಿಯಾಗಿ ನಡೆಯುವಂತೆ ನೋಡಲು, ಓರ್ವ ಮಂತ್ರಿಯರ್ಯರ ನೇಮಕವಾಗುವುದಂತೆ. ಯುದ್ಧ ಮೂಡುವುದು ಬ್ರಿಟನಿಗೆ ಒಪ್ಪುವುದಿಲ್ಲವಾದರು, ಜನತಾಂಗಸಭೆಯು ಗೌರವವನ್ನು ಕಾಯಲು ಶಾಂತಿಂ ಕ್ಷಣೆಗಾಗಿ, ಇವರಿಗೆ ಯುದ್ಧವೂಡಬೇಕಾಗುವುದಂತೆ.

—೦೦೦—

'ನಿದ್ದೆ ಬೇಕಾಗಿದೆ!'

೨೦೦೦೦ ರೂಪಾಯಿಗಳ ಬಹುಮಾನ!

ಕಲ್ಕತ್ತೆಯ ಮಾರವಾಡಿ ಸಾಹುಕಾರನೊಬ್ಬನು ಅಲ್ಲಿಯ ಸ್ಟೇಟ್ಸ್ ಮೇನ್ ಪತ್ರಿಕೆಯ ಮೂಲಕ 20 ಸಾವಿರ ರೂಪಾಯಿ ಬಹುಮಾನ ಸಾರಿರುವನು. ಆತನಿಗೆ 3 ವರ್ಷಗಳಿಂದ ನಿದ್ದೆಯಿಲ್ಲ, ನಿದ್ದೆ ಬರಿಸುವವರಿಗೆ ಈ ಬಹುಮಾನವನ್ನಾತನು ಕೊಡುವನು.

ಅವನೀಗ ಹಾಸಿಗೆಯಲ್ಲಿಯೇ ಇರುವನು. ಬರ್ಮಾ, ಸಿಲೋನ್, ಜರ್ಮನಿ, ಬ್ರಿಟನ್ ಮೊದಲಾದ ಕಡೆಗಳಿಂದ ಆತನಿಗೆ ಸುಮಾರು ಒಂದು ಸಾವಿರ ಸೂಚನೆಗಳು ಒಂದಿವೆ ಹಲವು ವೈದ್ಯರು ಚಿಕಿತ್ಸಿಸಲು ಯತ್ನಿಸಿದ್ದಾರೆ. ಆದರೆ ಒಂದೂ ಫಲಕಾರಿಯಾಗಿರುವದಿಲ್ಲ.

—೦೦೦—

ಸತ್ತವರು ಬದುಕಬಹುದೇ?

ಹಿಮದಲ್ಲಿ ಮಡಿದು ಬಿದ್ದ ಕೆಲವು ಜೀವಿಗಳು ಪುನರ್ಜೀವಿಸುವಂತೆ ಲಾಸ್ ಎಂಜಲ್ಸ್‌ನ ಡಾಕ್ಟರರೊಬ್ಬರು ಸಾಧಿಸಿರುವರು. ಅವುಗಳು ಕೇವಲ ಜೀವಿಸಿರುವಷ್ಟೇ ಅಲ್ಲ, ಸಂತತಿ ಉತ್ಪಾದಕ ಶಕ್ತಿಯನ್ನೂ ಪಡೆದಿವೆ.

ಹಿಮದಲ್ಲಿ ಮಡಿದ ಮನುಷ್ಯರನ್ನೂ ಹೀಗೆ ಜೀವಗೊಳಿಸಬಹುದು, ಆದರೆ ಅಂಥ ಪ್ರಾಣದಾನಕ್ಕೆ ಸರಕಾರದ ಅನುಮತಿ ಇಲ್ಲ.

ಕ್ಷಯರೋಗಿಗಳಿರುವವರನ್ನು ಹೀಗೆ ಹಿಮದಲ್ಲಿ ಸಾಯಿಸಿಕೊಳಿಸಿ ಪುನಃ ಜೀವದಾನಮಾಡುವುದಾದರೆ ಅವರ ಶರೀರದೊಳಗಿನ ರೋಗಾಣುಗಳೆಲ್ಲವೂ ನಾಶವಾಗಿ ಅವರು ಪರಿಶುದ್ಧರಾಗುವರೆಂದು ಈ ಡಾಕ್ಟರರ ಅಭಿಪ್ರಾಯ.

—೦೦೦—

ಶಾಹಿದ್ ಗಂಜ್ ಕಲಹ ನಿವಾರಣೆ.

ಮೆ. ಜಿನ್ನರು ಈ ಕಲಹ ನಿವಾರಣೆ ಕಾರ್ಯಕ್ಕಾಗಿ ಮೊನ್ನೆ ಲಾಹೋರಿಗೆ ಪ್ರವಾಸ ಮಾಡಿದ್ದರು. ಅವರು ಕೈಗೊಂಡ ಕಲಹ ನಿವಾರಣಾ ಕಾರ್ಯವು ಜಯಶೀಲವಾಗಿದೆಯೆಂದು ವಾರ್ತೆ ಬಂದಿರುತ್ತದೆ. ಮುಸ್ಲಿಮರು ತಮ್ಮ ಎಲ್ಲಾ ಜಳವಳವನ್ನು ನಿಲ್ಲಿಸಲು ಸಮ್ಮತಪಟ್ಟಿರುವರು. ಸರಕಾರವು ಈ ಗಲಭೆಯಲ್ಲಿ ಸೆರೆಮನೆ ಸೇರಿರುವವರನ್ನು ವಿಮೋಚನೆ ಮಾಡಿರುವರು ಶ್ರೀ ಜಿನ್ನರು ಸಿಕ್ಖ ಮುಖಂಡರ ಬೇಟಿಯನ್ನು ಮಾಡಿ, ಶಾಹಿದ್ ಗಂಜ್ ಮಸೀದಿ ಇವರು ಸ್ಥಳವನ್ನು ಯಾವ ಕೆಲಸಕ್ಕೂ ಉಪಯೋಗಿಸಬಾರದೆಂಬ ಶರ್ತ ಮಾಡುವ ವಿಚಾರ ಪರ್ಯಾಲೋಚಿಸಿದರು. ಇದಕ್ಕೆ ಸಿಖ್ಖರ ಅನುಮತಿ ದೊರಕಿರುತ್ತದೆಂದು ವಾರ್ತೆ. ಶ್ರೀ ಜಿನ್ನರು ಈ ಕಾರ್ಯವನ್ನು ಬೇಗನೆ ಪೂರ್ಣಗೊಳಿಸುವರು.

—೦೦೦—

೧೧೧ ದಿನಗಳ ಘೋರ ಉಪವಾಸವ್ರತ ಮುಗಿಯಿತು!

ಕಾಕೋರಿ ಒಳಸಂಚಿನ ವೊಕದ್ದಮ್ಮೆಯ ಕೈದಿಯೂದ ಶ್ರೀ. ಜೋಗೇಶ ಚತರ್ಜಿಯವರು ಲಕ್ನೋ ಸೆಂಟ್ರಲ್ ಜೈಲಿನಲ್ಲಿ ಕಳೆದ ನವೆಂಬರು 13 ರಿಂದ ಕೈಕೊಂಡ ಉಗ್ರ ಉಪವಾಸ ದೀಕ್ಷೆಯು ಕಳೆದ 2 ನೇ ತಾರೀಕಿಗೆ ಮುಗಿಯಿತು. ಶ್ರೀ. ಮೋಹನಲಾಲ ಸೆಕ್ಸೇನಾ, ಶಾಫಿ ಅಹಮದ್ ಕೆದ್ವಾಯಿ ಮತ್ತು ಪಂಡಿತ ಬಾಲಕೃಷ್ಣ ಶರ್ಮ—ಇವರು, ಚತರ್ಜಿಯನ್ನು ಒತ್ತಾಯಪಡಿಸಿ, ಆ ವ್ರತವನ್ನು ಅಲ್ಲಿಗೇ ಮುಗಿಸುವಂತೆ ಮಾಡಿದರು.

ಅಂದೇ ಬೆಳಿಗ್ಗೆ, ಎಸೆಂಬ್ಲಿಯಲ್ಲಿ ಹೋಮ್ ಮೆಂಬರರು,—ಶರ್ತವಿನಾ ಜೋಗೇಶ ಚತರ್ಜಿಯವರು ಉಪವಾಸವ್ರತವನ್ನು ಬಿಟ್ಟು ಕೊಟ್ಟರೆ, ಸರಕಾರವು ಆತನ ಕೇಳಿಕೆಗಳನ್ನು ಪರ್ಯಾಲೋಚಿಸಲು ಸಿದ್ಧವಿದೆ ಎಂದು ತಿಳಿಸಿದ್ದರು.

ಜೋಗೇಶರು ನಿಂಬೆರಸ ಮತ್ತು ಹಾಲನ್ನು ಸ್ವೀಕರಿಸಿ ಉಪವಾಸವನ್ನು ಕೊನೆಗೊಳಿಸಿದರು.

—೦೦೦—

ಕೆಂಬ್ರಿಜ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳ ಕೆಲವು ಕಾಲೇಜುಗಳ ಸ್ಥಾಪನೆಯ ಕಾಲ.

ಮಹಾ ಪಂಡಿತ ಶ್ರೀ ರಾಹುಲ ಸಾಂಕೃತ್ಯಾಯನರು ಯುರೋಪಿನಲ್ಲಿ ಸಂಚರಿಸಿ ಕೆಂಬ್ರಿಜ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳ ವಿಷಯವಾದ ಲೇಖನಗಳನ್ನು ಹಿಂದಿಯ 'ಗಂಗಾ' ಪತ್ರಿಕೆಯಲ್ಲಿ ಬರೆದಿರುವರು. ಆ ಲೇಖನಗಳಿಂದ ವಿಶ್ವ ವಿದ್ಯಾಲಯಗಳ ಕಾಲೇಜುಗಳ ಸ್ಥಾಪನಾ ಕಾಲವನ್ನು ತೆಗೆಯಲಾಗಿದೆ.

1 ಪೀಟರ್ ಹಾಸ್ ಕಾಲೇಜ್ 1284 ನೇ ಇಸವಿ, 2 ಕ್ಲೇರ ಕಾಲೇಜ್ 1326, 3 ಕಾರ್ಪಸ್ ಕ್ರಿಸ್ತಿ ಕಾಲೇಜ್ 1332, 4. ಪೆಂಬ್ರೋಕ್ ಕಾಲೇಜ್ 1346, 5. ಕೈ ' ಕಾಲೆಜ್ 1348, 6. ಕ್ರೈಸ್ಟ್ ಕಾಲೇಜ್ 1442. 7. ಕ್ವೀನ್ಸ್ ಕಾಲೆಜ್ 1447, 8 ಸೈಂಟ್ ಕೇತ್ರಿನ್ ಕಾಲೇಜ್ 1475 9 ಜೀಸಸ್ ಕಾಲೇಜ್ 1497, 10. ಸೈಂಟ್ ಜಾನ್ಸ್ ಕಾಲೇಜ್ 1509, 11 ಮೆಡಲಿನ್ ಕಾಲೇಜ್ 1547, 12 ಟ್ರಿನಿಟಿ ಕಾಲೇಜ್ 1546. 13. ಎಮನುವೆಲ್ ಕಾಲೇಜ್ 1584, 14. ಸಿಡ್ನಿ ಸಸೆಕ್ಸ್ ಕಾಲೇಜ್ 1589, 15. ಕಿಂಗ್ಸ್ ಕಾಲೇಜ್ 1807 16. ಗರ್ಟನ್ ಕಾಲೇಜ್ 1849, 17. ನ್ಯೂಹಂ ಕಾಲೇಜ 1875, ಮತ್ತು 18 ಸೆಲ್ವಿನ್ ಕಾಲೇಜ್ 1882.

—೦೦೦—

ಲೋಕದ 18 ಮಂದಿ ಕೋಟ್ಯಾಧೀಶರು.

'ಈಗ ಲೋಕದಲ್ಲಿ ಹೆಚ್ಚು ಧನವುಳ್ಳವರು ಯಾರೆಂಬ ವಿಷಯದಲ್ಲಿ ಚರ್ಚೆಯಿದೆ. ಆದರೂ ಈ 18 ಮಂದಿಯನ್ನು ಕೋಟ್ಯಾಧೀಶರೆಂದು ಪರಿಗಣಿಸಿದ್ದಾರೆ.' ಪೆಸಿನ 'ಊ' ಎಂಬ ಪತ್ರಿಕೆಯಲ್ಲಿ ಬರೆದು ಆ ಹದಿನೆಂಟು ಮಂದಿಯ ಹೆಸರನ್ನು ಈ ರೀತಿಯೂಗಿದೆ—1. ಎಡಸೆಲ್ ಫೋರ್ಡ್. 2. ಹೆನ್ರಿ ಫೋರ್ಡ್. 3. ಜಾನ್ ಡಿ ರಾಕ್‌ಫೆಲ್ಲರ್, (ಜೂನಿಯರ್) 4. ಜಾನ್ ಡಿ ರಾಕ್‌ಫೆಲ್ಲರ್ (ಸೀನಿಯರ್). 5. ಎಂಡ್ರೂ ಡಬ್ಲು ಮೆಲನ್—(ಅಮೇರಿಕಾ) 6. ರಾಟ್ಸ್ ಚೈಲ್ಡ್. 7. ಜಿ ಡಿ. ವೆಂಡೆಲ್. 8 ಲುಯಿಡ್ರೆಫ್ಸ್—(ಫ್ರಾನ್ಸ್) 9. ವಿಲಿಯಂ ಆಫ್ ಹೊಹೆಂಜಾಲರ್ನ್. 10. ಫಿಜಥಿಸೆನ್—(ಜರ್ಮನಿ) 11. ಡ್ಯೂಕ್ ಆಫ್ ವೆಸ್ಟ್‌ಮಿನಿಸ್ಟರ್. 12 ಲಾರ್ಡ್ ಇವರಿಂಗ್—(ಬ್ರಿಟನ್) 13 ನೈಜಾಮ್, ಹೈದರಾಬಾದ್. 14. ಗಾಯಕವಾಡ, ಬರೋಡ. (15) ಆಗಾಖಾನ್—(ಇಂಡಿಯ) 16. ಸೈಮನ್ ಪೆಟಿಗೋ (ಬೊಲೋವಿಯಾ) 17. ಸರ್ ಬೆಳಲ್ ಜಹಾರಫ್ (ಸರ್ಬಿಯ) 18. ಯಾನ್ ಯಾನ್ ಸಾಂಗರೇ (ಚೀನ)

—೦೦೦—

ಲೋಕಾರ್ನೋ ಒಪ್ಪಂದ ಮುರಿಯಿತು.

ಜರ್ಮನಿಯು ಹರ್ ಹಿಟ್ಲರರ ನೇತೃತ್ವದಲ್ಲಿ ಲೊಕಾರ್ನೋ ಒಪ್ಪಂದವನ್ನು ಮುರಿಯಿತು ಕೆಲವು ಯೂರೋಪು ರಾಷ್ಟ್ರಗಳು ಸೇರಿ ತಮ್ಮೊಳಗೆ ಸ್ನೇಹ ಮತ್ತು ಯುದ್ಧ ವಿಚಾರವಾಗಿ ಒಂದು ಒಪ್ಪಂದವನ್ನು ನೂಡಿಕೊಂಡಿದ್ದೇ ಈ ಲೋಕಾರ್ನೋ ಒಪ್ಪಂದ ಇದರಂತೆ ಫ್ರಾನ್ಸ್ ಮತ್ತು ಬೆಲ್ಜಿಯಂ ದೇಶಗಳ ಎಲ್ಲೆಯಲ್ಲಿರುವ ರೈನ್‌ಲೇಂಡಿನಲ್ಲಿ ಸೈನ್ಯ ಸಂಗ್ರಹವಿರಬಾರದಾಗಿತ್ತು. ಮೊನ್ನೆ ಜರ್ಮನಿಯು ಅಲ್ಲಿಗೆ ತನ್ನ ಸೈನ್ಯವನ್ನು ಕಳುಹಿ ಏಳು ಶತ್ರುಗಳನ್ನು ರಾಷ್ಟ್ರಗಳ ಕೂಟಕ್ಕೆ ಕಳಹಿಸಿ. ಅಲ್ಲದೆ ಲೋಕಾರ್ನೋ ಒಪ್ಪಂದವು ತಮಗೆ ತೀರ ಅಸಮಾಧಾನಕರವೆಂದೂ ಹೇಳಿ ಶತ್ರುಗಳ ಪ್ರಕಾರ ಜರ್ಮನಿಯು ರಾಷ್ಟ್ರಗಳ ಕೂಟಕ್ಕೆ ಸೇರಲು ಸಮ್ಮತಿಸುವದೆಂದೂ ತಿಳಿಸಿದೆ ಜರ್ಮನಿಯ ಈ ದಿಟ್ಟತನವಿಂದ ಯೂರೋಪಿನ ರಾಷ್ಟ್ರಗಳೆಲ್ಲ ತಳಮಳಿಗೊಂಡಿವೆ.

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ
ಭಾರತ ವಿಮಾರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯ, ನಿಮ್ಮ ಒಲುಮೆಯ ಈ ಸಂಸ್ಥೆಯಲ್ಲಿ
ತಪ್ಪದೆ ವಿಮೆಯನ್ನಿಳಿಸಿ.

ಮೊದಲಿನ 5 ವರ್ಷಗಳ ಮೌಲ್ಯವೇತನದ ಫಲಿತಾಂಶವಾಗಿ ಪ್ರತಿಯೊಂದು
1000 ರೂಪಾಯಿಗಳ ವಿಮಾಪತ್ರದ ಮೇಲೆ,—

ವರ್ಷ 1ರ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯವೇತನದಲ್ಲಿ ಇಷ್ಟು ಬೋನಸನ್ನು ಹಾಚಿದ ಹಿಂದೀ ವಿಮಾಕಂಪೆನಿಗಳು
ಅತಿ ವಿರಳವೆಂಬುದನ್ನು ಮರೆಯದಿರಿ)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು—
ಬಿ. ಜಿ. ಬೆಳ್ಳಪ್ಪನವರು,
ವಸ್ತ್ರಗಳ ವ್ಯಾಪಾರಿ, ಮಡಿಕೇರಿ.

(52—3)

ಸುಂಟಿಕೊಪ್ಪ ಏಜೆಂಟರು—
ಏ. ಎಸ್. ಮೂಚಯ್ಯನವರು.
ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

ಪಂಡಿತ ತಾರಾನಾಥರ ಡೈರಿ.

ಸಂಗ್ರಾಹಕರು:—ಪ್ರೌಢವಿದ್ಯಾಪೀಠ ಪತ್ರಿಕೋದ್ಯಮ ಶಾಲೆಯವರು.

(೧)

ಪೂರ್ವ ಕಾಲವು ವರ್ತಮಾನವಲ್ಲ. ಆಗಿನ ಸ್ಥಿತಿಗತಿಗಳು ಈಗಿಲ್ಲ. ಆಗಿನ ಜನರು ಈಗಿಲ್ಲ. ಆಗಿನ ಅನ್ಯ ವಿಶೇಷವಿಲ್ಲ. ಇಲ್ಲೀಗಿರುವದು ಆಗಿದ್ದಂತೆ ಈ ಭೂಮಿಯಲ್ಲಿ ಮೊತ್ತಮೊದಲೇ ಹುಟ್ಟಿ ಬೆಳೆದ ಮತಗಳ ವಾದವಿವಾದಗಳ ಸುಗತಿ ಸೂತ್ರಗಳಲ್ಲ, ಭಾರತ ವರ್ಷವು ಜಗತ್ತಿನ ಸಕಲ ಜನಾಂಗ ಸಂಸ್ಕೃತಿಗಳ ಕೇಂದ್ರವಾಗಿದೆ. ವಿವಿಧ ಜನತೆಯ ವಾಸಸ್ಥಾನವಾಗಿದೆ. ಜಗತ್ತಿನ ಕಂಣು ಗೊಂಬೆಯಾಗಿದೆ ಜಗತ್ತನ್ನು ಬಿಟ್ಟು ಅದಕ್ಕೆ ಬೇರೆ ಬೇವನವೇ ಇಲ್ಲ. ಭೌತಿನ ವಿಜ್ಞಾನ ಯಂತ್ರ ಉಪಕರಣಗಳಿಂದ ಪ್ರಯಾಣವೇಗವು ನಂಬಲಾರದಂತೆ ಹೆಚ್ಚಾಗಿ ಅಂತರವು ಕಡೆಮೆಯಾಗುತ್ತಾ ಬಂದಿದೆ. ಅದಂದ ಭೂಗೋಲವೇ ನಿಜವಾಗಿಯೂ ಪುಟ್ಟ ಚಂಡಿನಂತೆ ಭಾವನೆಗೆ ತೋರುತ್ತಿದೆ. ಪಂಚ ಖಂಡಗಳು ಒಂದಕ್ಕೊಂದು ಸರಿಹೊಂದಿಯಂತೆ ಆಗಿವೆ. ಕಾಲ ಅಂತರಗಳ ಮೇಲೆ ವಿಜ್ಞಾನವು ಪಡೆದ ವಿಜಯದ ಪರಿಣಾಮದಿಂದಲೊಂದು ಕಡೆ ಧನವುದಾಂಧತೆಯ ದುಶ್ಚಕ್ರಿಯುಂದ ಯುದ್ಧಗಳಾಗುತ್ತಿದ್ದರೂ ಇನ್ನೊಂದು ಕಡೆ ಇವರ ಸಂಖ್ಯೆಯನ್ನು ಒಹಳವಾಗಿ ವಿಂರಿದ ನವ ಯುವಕ ಯುವತಿಯರಲ್ಲಿ ವಿಚಾರ ಪ್ರಸ್ಥಾನವು ಐಕ್ಯಮುಖಿಯಾಗುತ್ತಲಿದೆ. ಯುದ್ಧಮೂಲವಾದ ಒರೆಯ ದೇಶಾಭಿಮಾನವು ಸಮಸ್ತ ಸ್ವಸಾಭಾಭಿಮಾನವಾಗಿ ಪರ್ಯವಸಿತ್ತಿದೆ. ಪ್ರತಿಯೊಂದು ವಿಧವಾದ ದುರಾಭಿಮಾನವೂ ಬೇಧವಿಲ್ಲದ ನ್ಯಾಯ ಮತ್ತು ಲೋಕ ಸಂಗ್ರಹಗಳಿಗೆ ಒಲಿಯಾಗಿ ಜೀಳುತ್ತಿದೆ. ವಿಜ್ಞಾನದ ಪರೀಕ್ಷಣ ಸಿದ್ಧಾಂತವು ಅಂಥ ಶೃದ್ಧೆಯನ್ನು ಪುಟಿಕ್ಕಿಟ್ಟಿದೆ ವೂತ್ರವೇ ಅಲ್ಲದೆ ತನ್ನ ಸಿದ್ಧಾಂತದ ಅಗ್ನಿಯಲ್ಲಿ ತಾನೂ ಶುದ್ಧಿಯನ್ನು ಹೊಂದುತ್ತಾ ಅಧ್ಯಾತ್ಮ ತತ್ವದ ಕಡೆಗೆ ಸಹಜವಾಗಿ ಒಂದು ಮುಟ್ಟುತ್ತಿದೆ. ಇದೆಲ್ಲವನ್ನೂ ನೋಡಿದರೆ ನವಯುಗವು ಹುಟ್ಟಿದೆ, ಇಲ್ಲವಾದರೆ ಹುಟ್ಟುತ್ತಲಾದರೂ ಇದೆ ಎಂಬದಾಗಿ ತೋರುತ್ತವೆ. ಪೂರ್ವಕಾಲವು ಎಂದಿಗೂ ಹಿಂತಿರುಗಲಿಕ್ಕಿಲ್ಲ!

(೨)

ಅನಿವಾರ್ಯವಾಗಿ ಬಂದಾಗುತ್ತಿದ್ದೇವೆ ಜಗತ್ತಿನ ವಯನುಭವಗಳು ಹಾಗೆ ಮೂಡುತ್ತಿವೆ. ಇತಿಹಾಸವು ಜಗತ್ತನ್ನೇ ಆ ಕಡೆಗೆ ತಿರುಗಿಪುತ್ತಿದೆ. ಸಹಸ್ರಾರು ವರ್ಷಗಳ ಕರ್ಮಫಲಭಾರದಿಂದ ಬಗ್ಗಿ ಹಪ್ಪದ ಕಾಲಪುರುಷನು ತನ್ನ ನೆರಳಿನಲ್ಲಿ ಜಗತ್ತೆಲ್ಲವನ್ನೂ ತುದಿಟ್ಟುಕೊಳ್ಳುತ್ತಿದೆ. ಅದಂ ಮೂರ್ಖ ಮಾನವನೋ ಇಂಥ ಸ್ಥಿತಿಗತಿಗಳೇ ಇಲ್ಲದ ಕಾಲದಲ್ಲಿ ಅನಿವಾರ್ಯವಾಗೇರ್ಪಟ್ಟ ರೀತಿನೀತಿಗಳನ್ನು ಈ ನವೀನ ಕಾಲಪರಿಸ್ಥಿತಿಗಳಿಗೆ ಒಡೆಯನಾಗಿ ನಿಯಮಿಸಲು ಹೆಣಗಾಡುತ್ತಿದ್ದಾನೆ. ಇದಕ್ಕೆ ಕಾಲಗತಿಯೇ ವಿರುದ್ಧವಾಗಿದೆ. ಅದರೊಡನೆ ನ್ಯಾಯವಾಗಿ ಸೇರಿಕೊಂಡು ನಡೆಯುವ ವಿಚಾರಶೀಲರ ಮನಸ್ಸೂ ವಿರುದ್ಧವಾಗಿದೆ. ಅಜ್ಞಾನದಿಂದಲೇ ಅಗಲೀ ಅಥವಾ ದುಷ್ಟಸ್ವಾರ್ಥದಿಂದಲೇ ಅಗಲೀ ಸಾರ್ವಜನಿಕ ದೃಷ್ಟಿಯನ್ನು ಮುಚ್ಚಿ ತನ್ನ ಕಡೆಗೂ ತನ್ನ ಹಿಂದಿನ ಗತಿಯ ಕಡೆಗೂ ಮಾತ್ರ ನೋಡುವವರು ಕಾಲವೈರಿಗಳು, ಜಗತ್ತನ್ನು ಒಂದಾಗಿಸುವ ಶಕ್ತಿಯ ದ್ವೇಷಿಗಳು. ಕಾಲ ಪ್ರಭಾವವು ಹಿಂದೂ ದೇಶವನ್ನು ಜಗತ್ತಿನ ಲೀಲಾರಂಗವನ್ನಾಗಿ ಮಾಡುವಂತಿದೆ. ಭೂತಕಾಲವನ್ನೇ ಆಲೋಚಿಸುತ್ತಾ ಈ ಕಾಲದೊಡನೆ ಮೇಲವಿಲ್ಲದ ಸಂಪ್ರದಾಯಗಳನ್ನೂ ಲೋಕಸಂಗ್ರಹಕ್ಕೆ ವಿರುದ್ಧವಾದ ಸ್ವಾರ್ಥವನ್ನೂ ನಡೆಸುವವರು ಲೀಲಾರಂಗವನ್ನು ಣರಂಗವನ್ನಾಗಿ ಮಾಡುತ್ತಾರೆ. ಅಂಥವರು ಪಾರ್ವಾತ್ಯರೇ ಆಗಲೀ ಪಾಶ್ಚಿಮಾತ್ಯರೇ ಆಗಲಿ ಲೋಕದ್ವೇಷಿಗಳೇ ಸರಿ.

(೩)

ಧರ್ಮದಲ್ಲಿ ಶಾಶ್ವತವಾದ ಜಗನ್ಮಾನ್ಯವಾದ ತತ್ವಗಳಿವೆ. ಜನಗಳ ಸೌಲಭ್ಯಕ್ಕಾಗಿ ಆಯಾ ಪ್ರಾಂತಗಳಲ್ಲಿ ಆಯಾ ಕಾಲಪರಿಸ್ಥಿತಿಗಳಿಗನುಸಾರವಾಗಿ ಅನುಭವಗಳಿಂದೇರ್ಪಟ್ಟ ಕಲವು ಸೂತ್ರಗಳಿವೆ. ಮೊದಲೆನೆಯವು ಗಣಿತದಂತೆ ಎಲ್ಲ ಕಾಲಗಳಲ್ಲಿಯೂ ಕಡೆಗಳಲ್ಲಿಯೂ, ಒಂದೇ. ಎರಡನೆಯವು ತಮ್ಮ ಉಗಮ ಸ್ಥಾನಕಾಲಗಳು ಮೂಸಿ ಟ್ಟೊಡನೆಯೇ ತಾವು ಬದಲುಗೊಳ್ಳುತ್ತವೆ. ಇವನ್ನೇ ಇನ್ನೂ ನಡೆಸಬೇಕೆಂದು ಯತ್ನಿಸಿದರೆ ಹೊಸ ಕಾಲ ಪರಿಸ್ಥಿತಿಗಳೇ ದಂಗೆಯನ್ನೆಬ್ಬಿಸುತ್ತವೆ ಆದರೆ ಅವನ್ನೆಲ್ಲವುಗಳನ್ನು ಬಿಡಬೇಕೋ? ಮೇಲೆ ಕೊಟ್ಟ ತತ್ವವು ಮನಸ್ಸಿಗೆ ಬಂದಲ್ಲಿ ಈ ಪ್ರಶ್ನೆಗೆ ಅವಕಾಶವೇ ಇಲ್ಲ ಈಗಿನ ಸ್ಥಿತಿಗೂ ಅವಕ್ಕೂ ಹೊಂದಿಕೆಯಿದ್ದರೆ ಅವನ್ನು ಬಿಡುವುದೇಕೆ? ಹೇಗಿದ್ದರೂ ತೊಲಗುವದೇನೋ ಅವಶ್ಯಕವೇ. ಹಿಟ್ಟು ಹೊಟ್ಟುಗಳನ್ನು ಎಂಗಡಿಸಬೇಕಾದರೆ ಪ್ರಶ್ನೆಯು ಅವನ್ನು ಬಿಡುವುದನ್ನೂ, ಹಿಡಿಯುವುದನ್ನೂ ಕುರಿತಲ್ಲ. ವರ್ತಮಾನವನ್ನು ಭೂತದ ಪ್ರತಿಯೋಗವೂಡಬೇಕೋ? ಅದು ಸಾಧ್ಯವೋ? ಎಂಬುದೇ ಪ್ರಶ್ನೆ. ಯಾವ ವಿಚಾರಶೀಲನೇ ಆಗಲೀ ಪೂರ್ವವನ್ನೆಲ್ಲ ತೊಲಗಿ ಬಿಡುವುದೇ ಈಗಿನ ಧರ್ಮವೆಂದು ಹೇಳಲಿಕ್ಕಿಲ್ಲ. ಆದರೂ ಅದನ್ನೇ ತೊಲಚಿ ತಿನ್ನುವದೊಂದೇ ಧರ್ಮವೆಂಬ ಮತಿಗೂ ಒಪ್ಪಲಿಕ್ಕಿಲ್ಲ. ಆದರೆ ಬಹುಸ್ಥಾಹಿಯಾದ ವಿಚಾರದಿಂದುದ್ಭವಿಸಿದ ಸಂಸ್ಕರಣಕ್ಕೆ ಎಲ್ಲೆಲ್ಲಿಯೂ ಪೂರ್ವಾಚಾರದ ಅಸಡ್ಡೆಯೇ ಇದ್ದರೆ ನವಜೀವನದ ಹುರುಪು ಇದನ್ನು ಮೆಲ್ಲನೆ ತೆರೆಯುವುದನ್ನು ಬಿಟ್ಟು ಜೋರಾಗಿ ಒಡೆದುಬಿಡುವುದು. ಇಲ್ಲಿಯೇ ಅನಿವಾರ್ಯ ಉತ್ಕ್ರಾಂತಿಯ ಸಂಕಲಪವಿದೆ. ಜೀವಿರುಲ್ಲಿ ಶವಯೋಗ ಶಕ್ತಿಯಿದೆ. ಇದು ಯಾವಾಗಲೂ ಪರಿಸ್ಥಿತಿಯೊಡನೆ ಬದಲಾಗುತ್ತ ಅದರೊಡನೆ ಮೇಲಪಿಸಿಕೊಂಡಿದ್ದು ತನ್ನ ವಿಕಾಸವನ್ನು ಸಾಧಿಸುತ್ತದೆ. ಅದರ ಸಹಜಗತಿ ಸವಯೋಗಗಳಿಗೆ ಅಡ್ಡಿಯಾಯುತೋ ಪರಿಣಾಮವು ಕಡಲಕ್ಕೆ ಪ್ರಾರಂಭವಾಗುವುದು ಪ್ರಗತ್ಯಿಯ ಸಹಜಗತಿಯು ನಿರ್ಬಂಧದಿಂದ ಕೆಲ್ಯೋಧವು ಉಂಟಾಗುವುದು, ದುಸ್ಸೃತ್ಯಗಳುಂಟಾಗುವವು. ಈ ಚಿನ್ಹೆಗಳನ್ನು ಕಂಡಾದರೂ ಸಮಾಜವು ಕಣ್ದೆರದು ತಿದ್ದಿಪರಿಸಿಕೊಳ್ಳದೆ ಹೋದರೆ ಭಯಂಕರವಾದ ಮುಂದ ಸುಧಾರಿಸಲಿಕ್ಕೆ ಸಾಧ್ಯವಾದ ಪುನೃತ್ಕ್ರಿಯು ಪ್ರಾರಂಭವಾಗುವುದು. ಅನಾಯಕತ್ವವೂ ಪರಿಣಮಿಸಬಹುದು. ಸಾಮಾನ್ಯವಾಗಿ ನೋಡಿದರೆ ವ್ಯಕ್ತಿಯ ಹಸಿವೆಯ ಅಗೌರವವೇ ಸಮಾಜದಲ್ಲಿ ಕಳ್ಳತನಕ್ಕೆ ಕಾರಣ ಕಾಮವಾಸನೆಯ ಅಗೌರವವೇ ಸಮಾಜದಲ್ಲಿ ವ್ಯಭಿಚಾರಕ್ಕೆ ಮೂಲ. ಸಮಾಜವು ಇದನ್ನು ಕಂಡುಹಿಡಿದು ಪ್ರತಿಯೊಂದು ವ್ಯಕ್ತಿಯು ಪ್ರವೃತ್ತಿಗೂ ಯೋಗ್ಯವಾದ ಗವ್ಯವನ್ನು ಕೊಟ್ಟು ಅದರ ಯೋಗ್ಯ ಭೋಗಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇದೇ ಅದರ ಮೊದಲನೆಯ ಧರ್ಮ.

ಇಷ್ಟೇ ಅಲ್ಲದೆ ಎಷ್ಟೋ ಧರ್ಮಗಳ ಮೂಲವೂ ಪ್ರಾರಂಭದಲ್ಲಿ ಜನಹಿತವೇ ಎಂಬುದನ್ನು ಮರೆಯಬಾರದು. ಅದಕ್ಕೆ ಸಂಬಂಧಪಟ್ಟ ಸರ್ವಮಾನ್ಯ ದೃಷ್ಟಿಕ್ಷಣವೂದಲು ಅನೈತಿಕ ಶೌಚ ಶಾಂತ್ಯೋಪಸಿಗ್ರಹ ಮುಂತಾದ ಭಾಗಗಳನ್ನೇ ಪ್ರಧಾನವಾಗಿಟ್ಟುಕೊಳ್ಳಬೇಕೇ ಅಲ್ಲದೆ, ಕಂಣಿಗೆ ಕಾಣದ, ಪರಿಚಾರಕ್ಕೆ ತೋರದ, ಊಹಾ ಪೋಹಗಳಲ್ಲಿ ಮೂಢ ಕುರುಡು ನಂಬಿಕೆಯನ್ನಿಟ್ಟುಕೊಂಡು ಇತರರನ್ನೊಕಾಡಿಸಬಾರದು. ಯಾವ ಮತದವರೇ ಆಗಲಿ, ಅಸ್ತಿಕರಾಗಲಿ, ನಾಸ್ತಿಕರೇ ಆಗಲಿ ಬುದ್ಧಿಯುಳ್ಳವರಾದರೆ ಧರ್ಮದ ತಿರುಳಾದ ಈ ಗುಣವನ್ನು ಮನ್ನಿಸದಿರಲಾರರು. ಆದರೆ ನನ್ನ ದುರ್ದೈವ! ಹಿಂದುಗಳೂ, ಮುಸಲ್ಮಾನರೂ, ಕ್ರೈಸ್ತರೂ ಆ ಸರ್ವಸಮ್ಮತವಾದ ಮತ್ತು ಬುದ್ಧಿಗೆ ಬಹು ಯೋಗ್ಯವೆಂದು ತೋರುವ ಧರ್ಮಮೂಲವನ್ನು ಮರೆತು ತಮ್ಮ ಅಂಧ ಶ್ರದ್ಧೆಗಳಿಗೇ ಪ್ರಾಧಾನ್ಯವನ್ನು ಕೊಟ್ಟು ಬುದ್ಧಿಯನ್ನು ಬಗ್ಗಹಿಡಿದು ಜಗಳಗಂಟಿಗರಾಗಿದ್ದಾರೆ. ಪೂರ್ವಾಚಾರದವರ ಜಳಕಟದ ಮೂಲವೂ ಈ ಅಂಧಶ್ರದ್ಧೆಯೇ. ಹಿಂದೂ ಮಹಮ್ಮದೀಯರ ವೈಮನಸ್ಯಕ್ಕೆ ಇದೇ ಕಾರಣ. ವಿಚಾರವಿದ್ದಲ್ಲಿ ಈ ನೀಚ ಮನಸ್ಕಾಪಗಳು, ಜಗಳಗಳು ಎಂದೆಂದಿಗೂ ಒಳಗಾವು ವತ್ತು ಮುಸ್ಲನವು ವಿಚಾರಕ್ಕೆ ಕೊಡುತ್ತಿರುವ ಮಾರ್ಗವನ್ನು ಪೂರ್ವಾಚಾರ ಪಕ್ಷದವರು ಕೊಡುವದಿಲ್ಲವೆಂದು ಸ್ವಲ್ಪ ಹೊತ್ತು ಇಬ್ಬರ ವಾದವಿವಾದಗಳನ್ನೂ ವಿಮರ್ಶಿಸಿದ ಮೂತ್ರಕ್ಕೆ ಸ್ಪಷ್ಟವಾಗಿ ತಿಳಿಯುವದು

(೪)

ಹಿಂದಿನವರು ಬರೆದಿಟ್ಟಂತೆ ಇಂದಿನವರು ಮಾಡಿಯೇ ತೀರಬೇಕೆಂಬದು ಇಂದಿನ ಮಾನವ್ಯಕ್ಕೇ ಅನಮಾನ ಇಂದಿನವರಿಗೆ ಮೆದುಳಿಲ್ಲವೋ? ವಿಚಾರವಿಲ್ಲವೋ? ಇಲ್ಲವೆಂದಿಟ್ಟುಕೊಂಡರೆ ಇಂದಿನ ಪೂರ್ವಾಚಾರದವರು ತಮ್ಮ ಜೀವನವೆಲ್ಲವನ್ನೂ ಹಿಂದಿನಂತೆಯೇ ಯಾಕೆ ನಡೆಸಬಾರದು? ಆ ಕಾಲದ ಆಹಾರ ವ್ಯವಹಾರಗಳು, ಉಡಿಗೆತೊಡಿಗೆಗಳು, ವಿದ್ಯಾಭ್ಯಾಸ ಕ್ರಮಗಳು, ದೀಪ ವತ್ತು ದೀವಟಿಗೆಗಳು, ವಾಹನಗಳು, ಪ್ರಯಾಣಪದ್ಧಿಗಳು ಮುಂತಾದವುಗಳನ್ನೇ ಈಗಲೇ ಏಕೆ ಇಟ್ಟುಕೊಳ್ಳಬಾರದು? ಅದಕ್ಕೆ 'ನಮ್ಮ ರಾಜ್ಯವಿಲ್ಲವಲ್ಲ' ಎಂದು ಅನೇಕರು ಹೇಳುವುದುಂಟು. 'ನಿಮ್ಮ ಆಚಾರದಲ್ಲಿ ಅಷ್ಟು ಶಕ್ತಿಯು ಇದ್ದಿದ್ದ ಮೇಲೆ ರಾಜ್ಯವು ಹೋಯಿತೇಕೆ? ಸುಮ್ಮಿರಲಿ. ರಾಜ್ಯವು ಬೇರೆಯಾದ್ದರಿಂದಲೋ ನಿಮ್ಮ ಆಚಾರಕ್ಕೆ ಅಡ್ಡಿ? ಹಾಗಾದರೆ ಆ ರಾಜ್ಯಾಂಗದವರ ವಸ್ತ್ರ, ಉಡಿಗೆತೊಡಿಗೆ, ದೀಪಯಂತ್ರ ಮುಂತಾದವುಗಳೆಲ್ಲವನ್ನೂ ಬಾಯಿಕಾಟ್ ಮಾಡಿ, ಅವರು ತಾವಾಗಿಯೇ ಗಂಟುಕಟ್ಟಿ ಹೋಗುವಂತೆ ನಿಮ್ಮ ಆಚಾರಕ್ಕೆ ಅನುಕೂಲವೇ ಆಗುವುದು, ಮತ್ತೆ ಕೈತಯಿಂಗವನ್ನೆಲ್ಲವಾದರೆ ದಾಸ್ಪರವನ್ನಾದರೂ ಮತ್ತೆ ಇಳಿಸಿ ಕಲಿ ಮಹಿಮೆಯನ್ನು ತಡೆಯಬಹುದಲ್ಲವೇ' ಆದರೆ ಅದಾಗದು. ತಮ್ಮ ಸಹಾಯಕ್ಕೆ ಆ ರಾಜಪಕ್ಷವೇ ಬೇಕು! 'ಈಗಿನ ಹುಡುಗರಿಂದ ದೇಶಧರ್ಮಗಳು ಕೆಟ್ಟವು' ಅಂತೆ! ಯುವಕರಿಗೆ ಧರ್ಮೋತ್ಕರ್ಷ ಇತಿಹಾಸವು ಜನ್ಮಾಗಿಯೇ ಗೊತ್ತಿದೆ. ಹಿಂದುಗಳ ಮೇಲೆ ದ್ವೇಷದಿಂದ ಅವರನ್ನು ನಿರ್ಮೂಲವೂಡುವುದಕ್ಕಾಗಿ ಚೀರ್ಣಾ ದೇಶದ ಧನಸಹಾಯವನ್ನು ನಿಮಂತ್ರಿಸಿದ ಬಹುದ್ಧರೂ ಅಹಿಂಸಾ ಪೂಜಕರಾದ ಬೌದ್ಧರ ಪೂರ್ವಾಚಾರಶೀಲರೇ ಆಗಿದ್ದರು! ಜೈನರೂ ಆಚಾರಶೀಲರೇ ಆಗಿದ್ದರು.

ಸುಮಾರು ಒಂದು ಸಾವಿರ ಜನರೊಡನೆ ದಂಡೆತ್ತಿ ಬಂದ ಮಹಮ್ಮದ ಗಜ್ನವಿಯನ್ನು ಕಂಡು ಕೈಕಟ್ಟಿಕೊಂಡು ಕೂತ ಲಕ್ಷಗಟ್ಟಲೆಯ ಸೋಮನಾಥ ಭಕ್ತರಾದ ಹಿಂದೂಗಳೂ ಪೂರ್ವಾಚಾರಶೀಲರೇ. ಪೃಥ್ವಿರಾಜನನ್ನು ಧ್ವಂಸ ಮಾಡುವುದಕ್ಕಾಗಿ ಮಹಮ್ಮದ್ ಗೋರಿಗೆ ಸಹಾಯವನ್ನು ಮಾಡಿದ ಚಾಂದಭಾಟನೂ ಆಚಾರಶೀಲನೇ! ಸ್ವದೇಶಿಯರಿಗೆ ವಿರುದ್ಧವಾಗಿ ಇಲ್ಲಿಗೆ ಬಂದ ಪೋರ್ಚುಗೀಸ್, ಡಚ್, ಫ್ರೆಂಚ್, ಇಂಗ್ಲೀಷ್ ಜನರಿಗೆ ಒಳಗಿಂದೊಳಗೆ ಸಹಾಯವನ್ನಿತ್ತು ಭಾರತೀಯರಲ್ಲಿ ಯಾರೂ ಸ್ವಧರ್ಮದ್ವೇಷಿಯಾಗಿಯಾಗಲೀ ಪೂರ್ವಾಚಾರ ವೈರಿಗಳಾಗಿಯಾಗಲೀ ಇಂದೇ ಇಲ್ಲ. ದೊಡ್ಡ ದೊಡ್ಡ ದೇವಾಲಯ ಮಜೀದಿಗಳನ್ನೂ ಕಟ್ಟಿಸಿದವರೆಷ್ಟೋ ಮಂದಿ ಇದ್ದಾರಿವರಲ್ಲಿ. ನಂದಕುವರನು ಜಾತಿಕೆಟ್ಟವನಲ್ಲ, ಉನೂಚಂದನೂ ಪೂರ್ವಾಚಾರ ವಿಮುಖನಲ್ಲ. ರಣಜಿತ್ ಸಿಂಹನೂ ಅಂಧನಲ್ಲ. ಇವರಲ್ಲಿ ಯಾರೂ 'ವಾಸ್ತವಿಕ್ಯ ವಿದ್ಯೆಯಿಂದಲಾಗಲಿ' 'ಭೌತಿಕ ದೃಷ್ಟಿಯಿಂದಾಗಲಿ' ಏರೋಪ್ಯ ನಾಸ್ತಿಕತ್ವದಿಂದಾಗಲೀ ಕೆಟ್ಟವರು ಇರಲಿಲ್ಲವಷ್ಟೆ? ಅದರೂ 'ಈಗಿನ ಇಂದ್ರಿಯೇನ್ಮಾದಕ ಸಂಸ್ಕೃತಿ' ಯಿಂದ ದೂರವಾಗಿದ್ದ ಈ ಪೂರ್ವಾಚಾರ ಶೀಲರಿಂದಲೇ ನಮ್ಮ ದೇಶಕ್ಕೆ ದಾಸ್ಯವು ಉಂಟಾಯಿತು! ಇವರಿಂದಲೇ ನಮ್ಮ ದೇಶವು ತೊಲವುಗೊಂಡಿತು! ಮತ್ತು ಈ ದೇಶ ಬಂದನ್ನೇ ಧರ್ಮೋಪದೇಶದಂತೆ ಅವರೂ ಪುಣ್ಯ ಭೂಮಿಯೆಂದು ಭಾವಿಸುವದಲ್ಲಿ ಏನು ಕಡೆಮೆಯೂರಲಿಕ್ಕಿಲ್ಲ! ಇತಿಹಾಸವು ಯುಪಕರಿಗೆ ಚೆನ್ನಾಗಿ ಗೊತ್ತಿದೆ ಸ್ವನಿರ್ಮಿತ ಧರ್ಮೋದ್ಧಾರಕರು ಪೂರ್ವಕಾಲದ ತೋಬರಿಯನ್ನು ಅವರ ಬಾಯಿಗೆ ಕಟ್ಟಿದ ಮಾತ್ರದಿಂದಲೇ ಅವರು ಅದಕ್ಕೆ ಬಾಯಿಹಾಕ ವುದೂ ಇಲ್ಲ. ಬಾಯಿ ಮುಚ್ಚುವುದೂ ಇಲ್ಲ. ಒರಭರುತ್ತಾ, ಕಟ್ಟಲಿಕ್ಕೂ ಬಿಡಲಿಕ್ಕಿಲ್ಲ. ಅವು ಹಿಂದಿನವಾಗಲೀ, ಇಂದಿನವಾಗಲಿ—ಆ ಚಾರ ವಿಚಾರಗಳೆಲ್ಲವೂ ಲೋಕ ಸಮಸ್ತಕ್ಕೂ ಹಿತಕಾರಿಯಾಗಬೇಕೆಂಬದೇ ಯುವಜನರ ಉದ್ದೇಶ. ಈ ಗವ್ಯಕ್ಕೆ ಅಂದ ಶ್ರದ್ಧೆಯು ಅನುಕೂಲವಾಗಲಾರದು.

ಮಡಿಕೇರಿ ಮುನ್ಸಿಫಲ್ ವಿಚಾರಣೆ.

ತಾರೀಕು 22—2—1936 ರಲ್ಲು ಮೆ| ಐ. ಸಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲು ನಡೆದ ಮಡಿಕೇರಿ ಮುನ್ಸಿಪಲ್ ಕಮಿಟಿಯ ಜನರಲ್ ವಿಚಾರಣೆಯ ಸಾರಾಂಶ:—

ಹಾಜರಿದ್ದವರು.

ಮೆ| ಗಳಾದ ಎಸ್. ಬಸಪ್ಪನವರು (ವೈಸ್ ಪ್ರೆಸಿಡೆಂಟ್) ದಿ ಎಗ್ಸಿಕ್ಯುಟಿವ್ ಪರ್ಸನಲ್ ಅಸಿಟೆಂಟರು ದಿ. ಸೀನಿಯರ್ ಸಬ್ ಅಸಿಟೆಂಟ್ ಸರ್ಜನರು ಶಾಲಾ ಡಿಪುಟಿ ಇನ್ಸ್ಪೆಕ್ಟರು ಪಿ. ಐ ಬೆಳ್ಯಪ್ಪನವರು ಯಂ. ಯಂ. ಬೆಳ್ಯಪ್ಪನವರು ಕೆ. ಮಲ್ಲಪ್ಪನವರು ಎನ್. ಸೋಮಣ್ಣನವರು ಆರ್. ಪ್ಯಾಂಮ್ಜಿಯವರು ಎ. ಅಬ್ದುಲ್ ರಹಮಾನ್ ಖಾನರು ವಿ. ಎನ್. ನಂಜಪ್ಪಶೆಟ್ಟು.

ಗೈರಾಜರಾದವರು.

ಮೆ| ಗಳಾದ ಉತ್ತರ ಕೊಡಗು ಸಬ್ಡೇದಾರರವರು ಡಾಕ್ಟರ್ ಎ. ಎ ವಾರುಣಿ ಮತ್ತು ಕೆ ಯಂ. ಮಹಮ್ಮದ್ ಗೌಸ್‌ರವರು ಕೆ. ವೆಂಕಟಗಿರಿಯವರು

1 ತಾರೀಕು 21—1—1936 ಮತ್ತ 30—1—1936 ರಲ್ಲು ನಡೆದ ಸ್ಪೆಸಿಯಲ್ ಮತ್ತು ಜನರಲ್ ಎರಡು ವಿಚಾರಣೆಗಳ ಫಲಿತಾಂಶವನ್ನು ಓದಿ ಒಪ್ಪಲಾಯಿತು.

2. 1936 ನೇ ಜನವರಿ ತಿಂಗಳ ಪ್ಲಸ್ ಮತ್ತು ಮೈನಸ್ ನೆಮೊ ತಿಂಗಳ ಆಡಿಟ್ ರಿಪೋರ್ಟು ಮತ್ತು ಓನರ್ಸಿಯವರ ಕೆಲಸದ ರಿಪೋರ್ಟುಗಳನ್ನು ಓದಿ ರೆಕಾರ್ಡು ಮಾಡಲಾಯಿತು.

3. ಕೊಡಗು ಬಾಯಿ ಸ್ಕಾವುಟ್ ಎಸೋಸಿಯೇಷನಿಗೆ 100 ರೂ. ಗಳ ಗ್ರಾಂಟನ್ನು ಮಂಜೂರು ಮಾಡಲಾಯಿತು.

4. ಮೆ| ಯಂ. ಯಂ. ಬೆಳ್ಯಪ್ಪನವರು ಮನೆ ಕಂದಾಯ ಮತ್ತು ಪ್ರೊಸೆಸ್ಸ್ ಕೊಟ್ಟ ಬಾವು, ಅಪೀಲ್ ಅರ್ಜಿಯನ್ನು ಓದಿ ಬರವ ವಿಚಾರಿಗೆ ತೆಗೆದುಕೊಳ್ಳುವುತಾಯಿತು.

5. ತನ್ನ ಮನೆ ಬಾಜು ಜಾಗವನ್ನು ಕೊಡಬೇಕಾಗಿ ಗೌಳಿ ಪಾಪಯ್ಯನು ಬರೆದ ಅರ್ಜಿಯನ್ನು ಓದಿ ಮುನ್ಸಿಪಾಲಿಟಿಗೆ ಹತ್ತು ಸೆಂಟು ಜಾಗವನ್ನು ಇಟ್ಟುಕೊಂಡು, ಎರಡು ಸೆಂಟು ಜಾಗವನ್ನು ಸೆಂಟು 1ರ 3—0—0 ರೂಪಾಯಿ ಮೇರೆ ಅರ್ಜಿದಾರನಿಗೆ ಕೊಡುವಂತೆ ತೀರ್ಮಾನವಾಯಿತು.

6. ಬಸ್ಸ್ ಸ್ಟಾಂಡ್ ಜಗುಂಡಿಯನ್ನು 3½ ಉದ್ದದ ಕಲ್ಲುಗಳಿಂದ 216 ಅಡಿ ಉದ್ದದ ವರೆಗೆ ಮುಚ್ಚುವ 252 ರೂಪಾಯಿನ ಎಸ್ಟಿಮೇಟನ್ನು ಓದಿ ಪಾಸ್ ಮಾಡಲಾಯಿತು.

7. ವರ್ಕೇಟ್ ಫೀಸ್ ಮತ್ತು ಎಲೆಪೇಟಿ ಟೋಲುಗೇಟ್ ಕಂಟ್ರಾಕ್ಟ್‌ದಾರರು ಕೆ. ಶಕುನಯ್ಯಶೆಟ್ಟು ಮತ್ತು ಗೋವಿಂದರಾಜುಲು ತಮ್ಮ ಕಂಟ್ರಾಕ್ಟ್ ಹಣದಲ್ಲಿ ರಿವಿಷನ್ ಕೊಡಬೇಕಾಗಿ ಬರಕೊಂಡ ಅರ್ಜಿಯನ್ನು ಓದಿ, ಸದರಿ ಅರ್ಜಿದಾರರಿಗೆ ನಷ್ಟ ಉಂಟಾಗಿರುವುದರಿಂದ ಸದರಿ ಕಂಟ್ರಾಕ್ಟು ಮೊಬಲಗಿನಲ್ಲಿ ಶೇಕಡ 2½ ರೂಪಾಯಿ ಮೇರೆ ರಿವಿಷನ್ ಕೊಡಲಾಯಿತು

8. ಡೋಬಿ ನಾರಾಯಣನು ಮತ್ತು ವಮ್ಮು ಬ್ಯಾರಿಯು ತಮ್ಮ ಮನೆಗಳಿಗೆ ಸ್ವಂತ ಪಂಪುಗಳನ್ನು ಕೊಡಬೇಕಾಗಿ ಬರಕೊಂಡ ಅರ್ಜಿಗಳನ್ನು ಓದಿ ಪಂಪುಗಳನ್ನು ಮಂಜೂರು ಮಾಡಲಾಯಿತು.

ಐ. ಸಿ. ಸುಬ್ಬಯ್ಯ,
ಪ್ರೆಸಿಡೆಂಟ್.

ಕೊಡಗು

ಮಾರ್ಚ್ ತಾ. ೧೩ನೇ ಶುಕ್ರವಾರ ೧೯೩೬.

ಕಮಿಷನರುಗಳ ಬಾರಿ ಬಾರಿಯ ವರ್ಗಾವರ್ಗಿ.

ಕೊಡಗಿನ ಸರ್ಕಾರದ ಸ್ಥಳೀಕ ಉದ್ಯೋಗಸ್ಥರಲ್ಲಿ ಕಮಿಷನರವರೇ ದೊಡ್ಡ ಅಧಿಕಾರಿಗಳು. ಅವರಿಗೆ ಇಲ್ಲಿಯ ಹೆಚ್ಚು ಕಮ್ಮಿ ಎಲ್ಲಾ ಇಲಾಖೆಗಳ ಮೇಲೆ ಅಧಿಕಾರವಿದೆ. ಅವರ ಮೇಲಧಿಕಾರಿಯೂದ ಚೀಫ್ ಕಮಿಷನರವರು ದೂರದ ಬೆಂಗಳೂರಿನಲ್ಲಿದ್ದುಕೊಂಡು, ವರ್ಷದಲ್ಲಿ ಕೆಲವುಸಾರಿ ಮಾತ್ರ ಇಲ್ಲಿಗೆ ಬರುವುದರಿಂದ ಈ ಪ್ರಾಂತ್ಯದ ಆಡಳಿತವು ಹೆಚ್ಚಾಗಿ ಕಮಿಷನರವರ ಅಭಿಪ್ರಾಯವನ್ನೇ ಅನ್ವಯಿಸಿ ನಡಸಲ್ಪಡುತ್ತಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಇದರಿಂದ ಚೀಫ್ ಕಮಿಷನರುಗಳು ತಮಗಿರುವ ಮೇಲಧಿಕಾರವನ್ನು ಚಲಾಯಿಸದಿಲ್ಲವೆಂದಲ್ಲ, ಎಲ್ಲಾ ಕಡೆಗಳಲ್ಲೂ ಸ್ಥಳೀಯ ಅಧಿಕಾರಿಗಳ ಅಭಿಪ್ರಾಯಕ್ಕೆ ಪ್ರಾಮುಖ್ಯತೆ ಇರುವುದು ವಾಡಿಕೆಯಾಗಿದೆ. ಆದುದರಿಂದ ಇಲ್ಲಿಯ ಆಡಳಿತೆಯ ಧೋರಣೆಯು ಹೆಚ್ಚಾಗಿ ಸ್ಥಳೀಯ ಮುಖ್ಯಾಧಿಕಾರಿಯೂದ ಕಮಿಷನರವರನ್ನು ಅವಲಂಬಿಸಿಕೊಂಡಿರುತ್ತದೆ. ಆದಕಾರಣ ಕಮಿಷನರವರ ನೇಮಕಕ್ಕೂ, ವರ್ಗಾವರ್ಗಿಗೂ ತುಂಬಾ ನಿಗಕೊಡಬೇಕಾಗಿದೆ.

ಕಮಿಷನರ್ ಪದವಿಗೆ ನೇಮಿಸಲ್ಪಡುವವರೆಲ್ಲಾ ಇಂಡಿಯನ್ ಸಿವಿಲ್ ಸರ್ವಿಸಿನವರೇ. ಆದರಲ್ಲೂ ಕೊಡಗಿಗೆ ಬರುವವರೆಲ್ಲರೂ ಯೂರೋಪಿಯನರೇ. ಅವರು ಹಿಂದೂಸ್ಥಾನದ ಬೇರೆ ಬೇರೆ ಕಡೆಗಳಿಂದ ಇಲ್ಲಿಗೆ ಬರುವವರಾಗಿದ್ದಾರೆ. ಆದುದರಿಂದ ಅವರಿಗೆ ಇಲ್ಲಿಗೆ ಬರುವ ಮೊದಲು ಈ ಪ್ರಾಂತ್ಯದ ವಿಷಯ ಏನೊಂದೂ ಗೊತ್ತಿರುವುದಿಲ್ಲ. ಅವರು ಇಲ್ಲಿಗೆ ಒಂದ ನಂತರ ತಮ್ಮ ತಾಬೆದಾರ ಉದ್ಯೋಗಸ್ಥರಿಂದಲೂ, ತಾವು ಸ್ವತಃ ದೇಶವನ್ನು ಸುತ್ತಿಯೂ ಇಲ್ಲಿಯ ಜನರ ಮತ್ತು ಸ್ಥಳಗಳ ಸ್ಥಿತಿಗತಿಗಳನ್ನು ಅರಿತುಕೊಳ್ಳುವರು. ಇದಕ್ಕಾಗಿ ಅವರಿಗೆ ಒಂದು ವರ್ಷವಾದರೂ ಸಮಯ ಬೇಕಾಗುವುದು. ಆ ಮೇಲೆ ಅವರು ಜನರ ಕಷ್ಟ ನಷ್ಟಗಳ ಪರಿಹಾರದ ಬಗ್ಗೆಯೂ, ಪ್ರಜೆಗಳ ಅವಶ್ಯಕತೆಗಳನ್ನು ಸಲ್ಲಿಸಿಕೊಡುವುದಕ್ಕಾಗಿಯೂ ತಕ್ಕ ಯೋಜನೆಗಳನ್ನು ಕಂಡು ಹಿಡಿದು ಅವುಗಳನ್ನು ಜಾರಿಗೆ ತರಬೇಕಾಗಿದೆ. ಇದಕ್ಕೆಲ್ಲಾ ಸಾಕಷ್ಟು ಕಾಲ ಬೇಕು. ಆದುದರಿಂದಲೇ ಗಜೆಟೆಡ್ ಉದ್ಯೋಗಸ್ಥನನ್ನು ಒಂದು ಕಡೆ ಐದು ವರ್ಷಗಳ ವರೆಗೆ ಇಡಬಹುದೆಂದು ನಿಬಂಧನೆ ಮಾಡಿರುವುದಾಗಿದೆ. ಯಾವ ಉದ್ಯೋಗಸ್ಥನನ್ನೇ ಆಗಲೀ ಐದು ವರ್ಷಗಳಿಗಿಂತ ಹೆಚ್ಚಾಗಿ ಒಂದು ಕಡೆ ಇಡುವುದು ಒಳ್ಳೆಯದಲ್ಲ. ಆದರೆ ವರ್ಷಕ್ಕೊಬ್ಬನಂತೆ ಆಗಾಗ್ಗೆ ಒದಲಾಯಿಸುತ್ತಾ ಇರುವುದೂ ಒಳ್ಳೆಯದಲ್ಲ.

ನಮ್ಮ ಕಮಿಷನರುಗಳ ಇತ್ತೀಚೆಗಿನ ವರ್ಗಾವರ್ಗಿಯನ್ನು ಸ್ವಲ್ಪ ವಿಚಾರಿಸುವ. 1934ನೇ ಇಸವಿ ಪ್ರಾರಂಭದಿಂದ ಇಂದಿನ ವರೆಗೆ ನಾಲ್ಕು ಮಹನೀಯರುಗಳ ಒದಲಾವಣೆಗಳಾದವು. 1934ನೇ ಮಾರ್ಚ್ ತಿಂಗಳಲ್ಲಿ ಮೆ. ಮೆಕ್ಕೈನವರು ಕೊಡಗಿನಿಂದ ವರ್ಗಾಯಿಸಲ್ಪಟ್ಟರು. ನಂತರ ದಿವಾನ್ ಬಹದ್ದೂರ್ ಕೇಟೋಳಿರ ಚಂಗಪ್ಪನವರು ನವಂಬರ್ ತಿಂಗಳ ವರೆಗೆ ಅಂದರೆ 8 ತಿಂಗಳು ಅಫೀಷ್ಯೇಟಿಂಗ್ ಕಮಿಷನರಾಗಿದ್ದರು. ಆ ಮೇಲೆ ಒಂದು ಮೆ. ಮೆಕೇವನ್‌ರವರು ನಾಲ್ಕು ತಿಂಗಳುಗಳಲ್ಲಿಯೇ ಅಂದರೆ 1935ನೇ ಮಾರ್ಚ್ ತಿಂಗಳಲ್ಲಿ ಬೇರೆ ಕಡೆಗೆ ವರ್ಗಾಯಿಸಲ್ಪಟ್ಟರು. ಅವರ ನಂತರ ಕಳೆದ ಮಾರ್ಚ್ 23ರಲ್ಲಿ ಕಮಿಷನರಾಗಿ ಒಂದ ಮೆ. ಬಾಸ್‌ವ್ಯೂನ್‌ರವರು ಈಗ ಒಂದು ವರ್ಷ ತುಂಬುವಷ್ಟರಲ್ಲೇ ಇಲ್ಲಿಂದ ವರ್ಗಾಯಿಸಲ್ಪಟ್ಟಿದ್ದಾರೆ. ಅವರ ಒದಲು ಮೆ. ಫ್ರೇಜರವರು ಈ ತಾ. 22ರಲ್ಲಿ ಕೊಡಗಿಗೆ ಬರಲಿರುವರು. ಅಂದರೆ 25 ತಿಂಗಳುಗಳಲ್ಲಿ ಕೊಡಗಿನ ಕಮಿಷನರ ಹುದ್ದೆಯಲ್ಲಿ ಐದು ಮಹನೀಯರುಗಳ ಒದಲಾವಣೆಗಳಾದಂತಾಯಿತು!

ಒಬ್ಬರು ಕಮಿಶನರಾಗಿ ಒಂದು ದೇಶದ ಸ್ಥಿತಿಗತಿಗಳನ್ನು ಅರಿತುಕೊಳ್ಳುವಷ್ಟರಲ್ಲಿಯೇ ವರ್ಗಾಯಿಲ್ಪಟ್ಟರು. ಇನ್ನೊಬ್ಬರು ಜನರ ಅವಶ್ಯಕತೆಗಳನ್ನು ತಿಳಿದುಕೊಂಡು ಅವುಗಳನ್ನು ನೆರವೇರಿಸಲು ಯೋಜನೆ ಮಾಡುವುದರೊಳಗಾಗಿ ಇಲ್ಲಿಂದ ಬೇರೆ ಕಡೆಗೆ ಕಳುಹಿಸಲ್ಪಟ್ಟರು. ಮತ್ತೊಬ್ಬರು ಯೋಜನೆಯನ್ನು ಮಾಡಿ, ಅದನ್ನು ಜಾರಿಗೆ ತರಲು ಪ್ರಾರಂಭಿಸುವ ಕಾಲದಲ್ಲೇ ಅವರ ಸ್ಥಳಕ್ಕೆ ಬೇರೊಬ್ಬರು ತರಲ್ಪಟ್ಟರು. ಹೀಗೆ ಆಗಾಗ್ಗೆ ವರ್ಗಾಯಿಸುವುದರಿಂದ ಆ ಉದ್ಯೋಗಸ್ಥರಿಗೇ ನೂ ತೊಂದರೆಗಳಿಲ್ಲದೆ ಇರಬಹುದು. ಅಥವಾ ಅವರಿಗ ಪ್ರಯೋಜನವೂ ಆಗಬಹುದು. ಆದರೆ ಅವರ ಆಡಳಿತೆಯಲ್ಲಿರುವ ಪ್ರಾಂತ್ಯದ ಸ್ಥಿತಿಯೇನಾಗುವದೆಂಬುದನ್ನು ಸರ್ಕಾರದವರು ಆಲೋಚಿಸಬೇಕಾಗಿದೆ. ಆಡಳಿತೆಯ ಧೋರಣೆಯಲ್ಲಿ ಯಾವದೊಂದು ನಿಶ್ಚಲತೆಯು ಇಲ್ಲದಾಗಿ ಜನಂಗೆ ಪ್ರಯೋಜನಕರವಾಗಿ ನಡಿಸಲ್ಪಡಲಾರದು. ಸ್ವಲ್ಪ ಸಮಯ ಹಿಡಿಯುವ ಪ್ರಜಾಹಿತ ಕಾರ್ಯಗಳ್ಯಾವೂ ನಡಿಸಲ್ಪಡುವ ಸಂಭವವಿಲ್ಲದಾಗುವುದು.

ಇದಲ್ಲದೆ ಕಮಿಷನರುಗಳ ಪದೇ ಪದೇ ವರ್ಗಾವರ್ಗಿಯಿಂದ ಕೊಡಗಿಗೆ ಇನ್ನೊಂದು ದೊಡ್ಡ ನಷ್ಟವಿದೆ ಕಮಿಷನರಾಗಿ ಬರುವ ಮಹನೀಯರ ಪ್ರಯಾಣದ ಭತ್ಯವು ಒಂದು ಸಾವಿರ ರೂಪಾಯಿಗಿಂತ ಹೆಚ್ಚಾಗುವುದು ವಾಡಿಕೆಯಾಗಿದೆ. ಗಡೀ ಗಡಿಯ ವರ್ಗಾವರ್ಗಿಯಿಂದ ನಮ್ಮ ಬಡ ಸರ್ಕಾರವು ಇದೊಂದು ದೊಡ್ಡ ತೆರಿಗೆಯನ್ನು ಆಗಾಗ್ಗೆ ತೆರಬೇಕಾಗುತ್ತದೆ. ಲಕ್ಷಗಟ್ಟಿ ಸಾಲ ಮಾಡಿ ಆಡಳಿತ ನಡಿಸುತ್ತಿರುವ ಇಲ್ಲಿಯ ಸರ್ಕಾರಕ್ಕೆ ಈಗಿನ ವರ್ಗಾವರ್ಗಿಯಿಂದ ಮತ್ತೊಂದು ದೊಡ್ಡ ಹೊರೆಯು ಉಂಟಾಗುತ್ತದೆ. ಈಗಿನ ಕಮಿಷನರವರಿಗೆ ಸುಮಾರು ಎರಡು ಸಾವಿರ ರೂಪಾಯಿ ಸಂಬಳ ವಗೈರೆ ತಿಂಗಳವಾರು ಕೊಡಲ್ಪಡುತ್ತಿದೆ. ಇನ್ನು ಬರುವಂಥ ಮಹನೀಯರಿಗೆ ಫೂಹೆಯೂನ ಸುಮಾರು ಎರಡೂವರೆ ಸಾವಿರದಷ್ಟು ರೂಪಾಯಿ ಕೊಡಬೇಕಾಗುವಂತೆ ಹೆಚ್ಚು ಕಾಲ ಉದ್ಯೋಗ ಮಾಡಿದವರನ್ನು ಇಲ್ಲಿಗೆ ವರ್ಗಾಯಿಸುವುದರಿಂದಲೇ ಇದು ಇಷ್ಟೆಲ್ಲಾ ಹೊರೆಗಳನ್ನು ಇಲ್ಲಿಯೆ ಸರ್ಕಾರದವರು ಅವರ ಈಗಿನ ಸ್ಥಿತಿಯಲ್ಲಿ ಹೇಗೆ ಹೊತ್ತುಕೊಳ್ಳುವರೋ ತಿಳಿಯದು. 'ಇಡೀ ಮುಳುಗಿದ ಮೇಲೆ ಚಳಿಯೇನು?' ಎಂಬ ನಾಣ್ಣುಡಿಯಂತೆ ವರ್ತಿಸುವರೋ ಏನೋ! ದೇಶಾಭಿವೃದ್ಧಿಯ ಕಾರ್ಯಗಳಿಗಾದರೆ 'ಖಜಾನೆಯಲ್ಲಿ ಹಣವಿಲ್ಲ; ಸರ್ಕಾರದ ಉತ್ಪತ್ತಿಗಿಂತ ಖರ್ಚು ಹೆಚ್ಚು' ಎಂದು ಅಧಿಕಾರಿಗಳು ಹೇಳಿಬಿಡುತ್ತಾರೆ. ಆದರೆ ಅನಾವಶ್ಯಕ ಹೊಸ ಉದ್ಯೋಗಗಳನ್ನು ಸ್ಥಾಪಿಸಲಿಕ್ಕೂ, ಗಡೀ ಗಡಿಯ ವರ್ಗಾವರ್ಗಿಗಳಿಂದಾಗುವ ಹೆಚ್ಚಿನ ಖರ್ಚುಗಳಿಗೂ ಹಣವು ಇದ್ದೇ ಇರುತ್ತದೆ. ಸರ್ಕಾರದ ಈ ತರಹದ ಧೋರಣೆಯನ್ನು ಬದಲಾಯಿಸಲು ಎಂದು ಸಾಧ್ಯವಾಗುವುದೋ ಅಂದು ದೇಶದ ಕಲ್ಯಾಣವಾಗುವುದು.

ಸಂತಾಪ ದಿನಾಚರಣೆ.

ಪಂಡಿತ ಜವಾಹರ್‌ಲಾಲ್ ನೆಹರುರವರ ಪತ್ನಿ ಶ್ರೀಮತಿ ಕಮಲ ನೆಹರುರವರ ಮರಣಕ್ಕಾಗಿ ದುಃಖವನ್ನು ಸೂಚಿಸಲು ಇಡೀ ಭಾರತ ಭೂಮಿಯಲ್ಲಿ ಈ ತಾ. 8ನೇ ಆದಿತ್ಯವಾರ ಪರಿತಾಳಗಳನ್ನು ಆಚರಿಸಿ ಸಂತಾಪ ಎಂಟಿಂಗುಗಳನ್ನು ನಡಸಬೇಕೆಂದು ಕಾಂಗ್ರೆಸಿನ ಅಧ್ಯಕ್ಷರ್ತಾದ ಬಾಬು ರಾಜೇಂದ್ರ ಪ್ರಸಾದರವರು ಹಿಂದೀಯಲ್ಲಿ ವಿನಂತಿ ಮಾಡಿದ್ದರು. ಆದರೆ ತಾ. 8 ರಲ್ಲಿ ಹೋಳಿ ಹಬ್ಬವಾಗುವುದರಿಂದ ಆ ತಾರೀಖಿನ್ನು ವಜಾ ಮಾಡಿ ಈ ತಾ. 11 ನೇ ಬುಧವಾರ ಆಚರಿಸಬೇಕೆಂದು ಇತ್ತಲಾಗಿ ಅವರು ಪ್ರಕಟಿಸಿದ್ದರು.

ಅದೇ ಮೇರೆ ಕೊಡಗಿನ ಜನರು ಸಂತಾಪವನ್ನು ಸೂಚಿಸಲು ಕಳೆದ ಬುಧವಾರ ಮಧ್ಯಾಹ್ನ 1½ ಗಂಟೆಗೆ ವೀರಾಜಪೇಟೆ ವಿಕ್ಟೋರಿಯಾ ರೀಡಿಂಗ್ ರೂಮಿನ ಎದುರುಗಡೆ ಮೈದಾನದಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಿತ್ತು. ಮಾ. ರಾ. ಮೊಳೇಟ್ಟಿರ ಮುದ್ದಪ್ಪನವರು ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಮೆ. ಪಿ. ಐ. ಬೆಳ್ಯಪ್ಪನವರು—ಈ ದಿನಾಚರಣೆಯ ಉದ್ದಿಶ್ಯ, ದಿವಂಗತ ಕಮಲ ನೆಹರುರವರ ಜೀವನ ಚರಿತ್ರೆ, ಅವರು ಮಾಡಿದ ದೇಶಸೇವೆ ಮತ್ತು ಅವ್ವಿತೀಯ ತ್ಯಾಗ ಮೊದಲಾದವುಗಳನ್ನು ವಿವರಿಸಿ ಭಾಷಣ ಮಾಡಿ ಈ ಕೆಳಗಿನ ಠರಾವನ್ನು ಸಭೆಯ ಮುಂದಿಟ್ಟರು.

'ಪಂಡಿತ ಜವಾಹರ್‌ಲಾಲ್ ನೆಹರುರವರ ಪತ್ನಿ ಶ್ರೀಮತಿ ಕಮಲನೆಹರುರವರ ಅಕಾಲ ಮರಣದಿಂದ ಹಿಂದೂಸ್ಥಾನಕ್ಕೆ ಸಂಭವಿಸಿರುವ ವಿಶೇಷವಾದ ನಷ್ಟವನ್ನೂ, ಅದಕ್ಕಾಗಿ ಈ ಸಭೆಯವರ ಅಪಾರವಾದ ದುಃಖವನ್ನೂ ಸೂಚಿಸುತ್ತಾರೆ.'

ಸಭೆಯವರು ಎದ್ದು ನಿಂತು ಮೃತರ ಆತ್ಮಕ್ಕೆ ಶಾಂತಿಯುಂಟಾಗಲೆಂದು 2 ನಿಮಿಷಗಳ ವರೆಗೆ ಮೌನವಾಗಿ ಪ್ರಾರ್ಥನೆ ಮಾಡಿ ಮೇಲಿನ ಠರಾವನ್ನು ಪಾಸುಮಾಡಿದರು

ಮೆ. ಐ ಪಿ ಕಾರ್ಯಪ್ಪನವರು—ತಿಂಥಾ ಅಖಿಲ ಭಾರತ ದಿನಾಚರಣೆಯ ಪ್ರಾಮುಖ್ಯತೆಯನ್ನು ವಿವರಿಸಿ, ಅಧ್ಯಕ್ಷರಿಗೂ, ಸಭಿಕರಿಗೂ ವಂದನೆಗಳನ್ನು ಅರ್ಪಿಸಿದರು. ಅಧ್ಯಕ್ಷರು ನೆರೆದಿದ್ದವರಿಗೆ ವಂದಿಸಿದ ಮೇಲೆ ಸಭೆಯು ಬರ್ಕಾಸ್ತಾಯಿತು.

ಲೊಕಾರ್ನೋ ಒಪ್ಪಂದವೂ ಯೂರೋಪೂ.

ಮಹಾ ಯುದ್ಧದ ನಂತರ ಯೂರೋಪಿನ ರಾಷ್ಟ್ರಗಳೆಲ್ಲವೂ, ಕೆಲವು ಜಯದ ದರ್ಪದಿಂದ ಪರಾಜಿತ ರಾಷ್ಟ್ರಗಳನ್ನ ಎಂದಿಗೂ ತಲೆಯೆತ್ತದಂತೆ ಮಾಡುವ ಉದ್ದಿಶ್ಯದಿಂದಲೂ, ಕೆಲವು ಯುದ್ಧದ ಆಘಾತಕ್ಕೆ ಸಿಲುಕಿ ಜೇತರಿಸಲು ಸಮಯ ಬೇಕೆಂಬ ಇರಾದೆಯಿಂದ ಮತ್ತು ಜಯಶೀಲವಾದ ರಾಷ್ಟ್ರಗಳ ಹೆದರಿಕೆಯಿಂದಲೂ ಅನೇಕ ಸಂಧಿ ಕೌಲುಗಳನ್ನು ಮಾಡಿಕೊಂಡವು. ವರ್ಸೆಲ್ಸ್ ಒಪ್ಪಂದವೂ, ತದನಂತರದ ಲೊಕಾರ್ನೋ ಒಪ್ಪಂದವೂ ಇದಕ್ಕೆ ಉದಾಹರಣೆಗಳಾಗಿವೆ. ದೇಶದ ಶಾಂತಿಗಾಗಿ, ಅಬಲ ರಾಷ್ಟ್ರಗಳ ಸ್ವಾತಂತ್ರ್ಯಕ್ಕಾಗಿ, ಎಂಬೀ ಮೊದಲಾದ ಶುಭನಾಮಗಳೊಡನೆ ಅತೀ ಡಾಂಬಿನಿಂದ ಏರ್ಪಟ್ಟ ವರ್ಸೆಲ್ಸ್ ಒಪ್ಪಂದವು ಯಾವ ಪ್ರಕಾರದ ಶಾಂತಿ ಮತ್ತು ಸ್ವಾತಂತ್ರ್ಯಗಳನ್ನು ಪ್ರಾಪ್ತಿಸಿತೆಂಬುದು ಭಾರತೀಯರಿಗೆ ತಿಳಿಯದ್ದಲ್ಲ. ಅದೇ ಪ್ರಕಾರ ಆಗ ಪರಾಜಿತವಾದ ಜರ್ಮನಿಯ ಹಿತಗಳೆಲ್ಲವನ್ನೂ ಮೂಲೆಗೊತ್ತಿ, ಈ ಖರಾರುಗಳು ಏರ್ಪಟ್ಟವೆಂಬುದು ಎಲ್ಲರಿಗೂ ತಿಳಿದೇ ಇದೆ. ಆದರೆ ಸರ್ವಾಧಿಕಾರಿ ಹಿಟ್ಲರರ ನೇತೃತ್ವದಲ್ಲಿ ಜರ್ಮನಿಯು ತನಗಾದ ಅನ್ಯಾಯವನ್ನು ಅರಿತು ಅದನ್ನು ಮುರಿದು ಹಾಕಲು ಎಡೆ ಬಿಡದೆ ಪ್ರಯತ್ನಿಸುತ್ತಲಿದೆ. ಈ ಮೊದಲೇ ವರ್ಸೇಲ್ಸ್ ಒಪ್ಪಂದದ ಶರ್ತಗಳನ್ನು ಮುರಿದು ಜರ್ಮನಿಯು ತನ್ನ ಸೈನ್ಯವನ್ನು ಮಹತ್ತಾಗಿ ಬೆಳೆಯಿಸಿತು. ಅಲ್ಲದೆ ಕ್ರಮವಾಗಿ ತನ್ನ ಅಸ್ತಿತ್ವವನ್ನು ಭದ್ರಪಡಿಸಿತು. ಮೊನ್ನೆ ತಾರೀಕು 7 ರಲ್ಲಿ ಜರ್ಮನಿಯು ಒಹಿರಂಗವಾಗಿ ಲೊಕಾರ್ನೋ ಒಪ್ಪಂದವನ್ನು ಜಾರು ಮಾಡಿತ. ಈ ಒಪ್ಪಂದದ 180, 42, 43 ಮತ್ತು 6ನೇ ನಿಬಂಧನೆಗಳ ಪ್ರಕಾರ ಜರ್ಮನಿಯು ರೈನ್ ನದಿಯ 50 ಕಿಲೋಮೀಟರ್ ದೂರದ ವರೆಗಿನ ತನ್ನ ಎಲ್ಲೆಯಲ್ಲಿ ಯಾವ ಸೈನ್ಯ ಸಂಗ್ರಹವನ್ನಿಡಬಾರದಾಗಿಯೂ, ಅಲ್ಲಿ ಯಾವದೇ ಕೋಟೆ ಮೊದಲಾದವುಗಳನ್ನು ಸ್ಥಾಪಿಸಬಾರದಾಗಿಯೂ, ಆ ಸ್ಥಳದಲ್ಲಿ ಯುದ್ಧ ಸಂಬಂಧವಾದ ಏನೊಂದೂ ಕಾರ್ಯಗಳನ್ನೂ ಕೈಕೊಳ್ಳಬಾರದಾಗಿಯೂ ನಿಷ್ಕರ್ಷಿತವಾಗಿತ್ತು. ಆದರೆ ಜರ್ಮನಿಯು ಆ ಸ್ಥಳಕ್ಕೆ ಮೊನ್ನೆ ತಾನೇ 10,000 ಸೈನಿಕರನ್ನು ಕಳುಹಿಸಿದೆ. ಅಲ್ಲಿ ನಾಲ್ಕೈದು ಯುದ್ಧ ಕೇಂದ್ರಗಳನ್ನು ಏರ್ಪಡಿಸಲು ಏರ್ಪಾಡು ಮಾಡಿದೆ. ಅಲ್ಲದೆ ಈ ಪ್ರಕಾರ ಏಳು ಶರತ್ತುಗಳನ್ನು ಇತರ ರಾಷ್ಟ್ರಗಳಿಗೆ ತಿಳಿಸಿದೆ.

(1) ಜರ್ಮನಿಯು ಫ್ರಾನ್ಸ್-ಸೋವಿಯಟ್ ಕರಾರಿನ ನಿಮಿತ್ತ ಲೊಕಾರ್ನೋ ಒಪ್ಪಂದವನ್ನು ಮುರಿದಿದೆ.

(2) ರೈನ್‌ಲೇಂಡಿನಲ್ಲಿ ಸೈನ್ಯ ಸಂಗ್ರಹಿಸಲು ತಾನು ಪೂರ್ಣ ಸ್ವತಂತ್ರಳೆಂದು ಭಾವಿಸುತ್ತದೆ

(3) ಈ ಪ್ರದೇಶದಲ್ಲಿ ಸೈನ್ಯ ಸಂಗ್ರಹ ಮಾಡಬಾರದೆಂದರೆ ಫ್ರಾನ್ಸ್ ಮತ್ತು ಬೆಲ್ಜಿಯಂ ದೇಶಗಳು ತನ್ನ ಆ ಪ್ರಾಂತ್ಯದ ಎಲ್ಲೆಕಟ್ಟಿನಲ್ಲಿರುವ ಸೈನ್ಯ ಸಂಗ್ರಹವನ್ನು ಹಿಂತೆಗೆಯಬೇಕು.

(4) ಬ್ರಿಟನು ಮತ್ತು ಇಟಲಿಯು ತಕ್ಕ ಭರವಸೆ ಕೊಟ್ಟಲ್ಲಿ ಮತ್ತೊಂದು ವಿರಾರಿಗೆ ಸಹಿ ಹಾಕಲು ಜರ್ಮನಿಯು ಸಿದ್ಧವಿದೆ.

(5) ಹೋಲೆಂಡ್ ದೇಶವು ಒಪ್ಪಂದಕ್ಕೆ ಸೇರಲಿಚ್ಛಿಸಿದಲ್ಲಿ ಅದು ಸೇರಬಹುದು.

(6) ಪಶ್ಚಿಮದಲ್ಲಿ ಒಂದು ವಾಯು ಕವುಲನ್ನೂ, ಪೂರ್ವದಲ್ಲಿ ಒಂದು ಅಕ್ರಮಣವನ್ನು ಮಾಡುವುದಿಲ್ಲವೆಂಬ ಕೌಲನ್ನು (ಲಿಥೋನಿಯವನ್ನು ಸೇರಿ) ಮಾಡಲು ಸಿದ್ಧವಿದೆ.

(7) ವಸಾಹತುಗಳ ಪ್ರಶ್ನೆಯು ಸ್ವಲ್ಪ ಸಮಯದಲ್ಲಿ ಇತ್ಯರ್ಥವಾಗುವುದೆಂದು ಜರ್ಮನಿಯು ಆಶಿಸುತ್ತದೆ.

ಈ ಪ್ರಕಾರ ಶರತ್ತುಗಳನ್ನು ಹಾಕಿ ಜರ್ಮನಿಯು ಒಂದು ಹೆಜ್ಜೆಯನ್ನು ಮುಂದಿಟ್ಟಿದೆ. ಯೂರೋಪಿನ ಇತರ ರಾಷ್ಟ್ರಗಳೆಲ್ಲವೂ ಭಯಭೀತವಾಗಿವೆ. ಇಂಗ್ಲೆಂಡು ಯಾವ ಪಕ್ಷಕ್ಕೂ ವಿರೋಧವಾಗದಂತೆ ಒಹಳ ಜಾಗ್ರತೆಯಿಂದ ವರ್ತಿಸುತ್ತದೆ.

ಪೊನ್ನಂಪೇಟೆನಾಡಿನ ಸಹಕಾರಿ ಸಮ್ಮೇಳನ.

ಪೊನ್ನಂಪೇಟೆನಾಡಿನ ಸಹಕಾರಿ ಪರಿಷತ್ತು ಈ ತಾ. 7 ರಲ್ಲಿ ಪೊನ್ನಂಪೇಟೆ ಶಾಲೆಯಲ್ಲಿ ನಡೆಯಿತು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಮಾ. ರಾ. ನಂಡೇಪಂಡ ಮಂದಣ್ಣನವರು ಅಧ್ಯಕ್ಷರಾಗಿದ್ದರು. ಮಧ್ಯಾಹ್ನ 2 ಗಂಟೆಗೆ ಅಧ್ಯಕ್ಷರು ವಸ್ತು ಪ್ರದರ್ಶನವನ್ನು ತೆರೆದ ಮೇಲೆ ಸಭೆಯು ಪ್ರಾರಂಭವಾಯಿತು. ಯೂನಿಯನ್ ಪ್ಯಾಸಿಡೆಂಟರಾದ ಮೆ. ಕೊಳ್ಳಿಮಾಡ ಕಾರ್ಯಪ್ಪನವರು 'ಕೊಡಗಿನಲ್ಲಿ ಪ್ರತ್ಯೇಕ ಭೂಮಿ ಅಡಮಾನದ ಬ್ಯಾಂಕನ್ನು ಸ್ಥಾಪಿಸುವುದರ ಬದಲು ಈಗಿರುವ ಸೌತ್ಸರ್ನ್ ಸಹಕಾರಿ ಬ್ಯಾಂಕಿನಲ್ಲೇ ದೀರ್ಘ ಕಂತಿನ ಸಾಲ ಕೊಡುವ ಏರ್ಪಾಡು ಮಾಡುವುದು ಉತ್ತಮ' ಎಂಬ ಠರಾವನ್ನು ಸಭೆಯ ಮುಂದಿಟ್ಟು ದೀರ್ಘ ಭಾಷಣ ಮಾಡಿದರು. ಠರಾವಿಗೆ ಪರವಾಗಿ ಮೆ. ಗಳಾದ ಕಾಕಡ ಗಣಪತ್ತಿಯವರು, ಅಜ್ಜಿಕುಟ್ಟಿರ ಪೊನ್ನಪ್ಪನವರು ಮತ್ತು ಪಿ. ಐ. ಬೆಳ್ಯಪ್ಪನವರು ಮಾತಾಡಿದರು. ಠರಾವಿಗೆ ವಿರೋಧವಾಗಿ ಮೆ. ಗಳಾದ ಮೂಚಿಮಂಡ ಸಂಜುಂಡನವರು, ವೀರಭದ್ರಯ್ಯನವರು, ಕಾಡ್ಯಮಾಡ ಪೆಮ್ಮಯ್ಯನವರು, ಚೆಪ್ಪುಡಿರ ಸುಬ್ಬಯ್ಯನವರು, ಪುಚ್ಚಿಮಾಡ ಕುಟ್ಟಪ್ಪನವರು, ಕೊಂಗಂಡ ಗಣಪತ್ತಿಯವರು, ಪಿ ಜಿ ಮುದ್ದಮ್ಮಯ್ಯನವರು ಮತ್ತು ಮನೆಯಪಂಡ ಯಂ. ಬೆಳ್ಯಪ್ಪನವರು ಮಾತಾಡಿದರು. ಠರಾವಿಗೆ ಪರವಾಗಿ 76 ಜನರೂ, ವಿರೋಧವಾಗಿ 41 ಜನರೂ ಓಟು ಕೊಟ್ಟದ್ದರಿಂದ-ಠರಾವು ದೊಡ್ಡ ಒಹುಮತದಿಂದ ಪಾಸಾಯಿತು.

ಈ ನಾಡಿಗೆ ಸರ್ಕಾರದವರು ಒಂದು ಗೂಳಿಯನ್ನಿಡಬೇಕು; ದಕ್ಷಿಣ ಕೊಡಗಿಗೆ ಪ್ರತ್ಯೇಕ ಒಬ್ಬ ಎಗ್ರಿಕಲ್ಚರ್ ಡೆಮೊನ್‌ಸ್ಟ್ರೇಟರನ್ನು ನೇಮಿಸಬೇಕು; ಹಳೇ ತಾಲೂಕಾ ವಾರು ಒಬ್ಬೊಬ್ಬ ಸಹಕಾರಿ ಇನ್‌ಸ್ಪೆಕ್ಟರನ್ನು ನೇಮಿಸಬೇಕು ಎಂಬ ಠರಾವುಗಳು ಸರ್ವಸಮ್ಮತದಿಂದ ಪಾಸಾದವು. ಇನ್ನಾಮುಗಳನ್ನು ಹಂಚಿದ ಮೇಲೆ ಅಧ್ಯಕ್ಷರ ಸ್ವಾರಸ್ಯವಾದ ಭಾಷಣದಿಂದ ಸಭೆಯು ಅಂತ್ಯವಾಯಿತು. ನಂತರ ತಿಂಡಿ ತೀರ್ಥಗಳಿದ್ದವು. ರಾತ್ರಿ ಮಾಯಾಲಹರಿಯ ಪ್ರದರ್ಶನವಾಯಿತು.

ಸೂಚನೆ.

ಇನ್ನು ಮುಂದೆ ನಮ್ಮ ಪತ್ರಿಕೆಗಳು ಪ್ರತೀ ವಾರ ಈ ಕೆಳಗೆ ಸೂಚಿಸಿರುವ ಮಹನೀಯರುಗಳಿಂದ ಆಯಾಯ ಸ್ಥಳಗಳಲ್ಲಿ ಹಂಚಲ್ಪಡುವವು.

ಅಮ್ಮತ್ತಿ—ಮೆ. ನೆಲ್ಲಮಕ್ಕಡ ಅಚ್ಚಯ್ಯನವರು, ವ್ಯಾಪಾರಿ.

ಗೋಣಿಕೊಪ್ಪಲು—ಮೆ. ಮಲ್ಲೇಂಗಡ ಚಂಗಪ್ಪನವರು, ಮೆ ಎ. ಕಾಳಮ್ಮಯ್ಯನವರ ಹೊಟೇಲು.

ಪೊನ್ನಂಪೇಟೆ—ಮೆ ಪಿ. ಜಿ. ಮುದ್ದಮ್ಮಯ್ಯನವರು, ಯೂನಿಯನ್ ಆಫೀಸು.

ಸುಂಟಿಕೊಪ್ಪ—ಮೆ. ಎ. ಎಸ್. ಮೂಡಯ್ಯನವರು, ಬಟ್ಟೆ ವ್ಯಾಪಾರಿ.

'ಕೊಡಗು' ಲಿಮಿಟೆಡ್,
ತಾ. 13—3—'36.

ವೇ॥ನೇಜರು.

ಜಿಲ್ಲಾದೇಶ.

ಮಡಿಕೇರಿ ಚೌಕಿಯ ಬಳಿ ಹಣ್ಣಿನಲ್ಲಿ ಅಕ್ಕಿ ಮೊಡುವ ಗಿರಣಿಯೊಂದು ತೆರೆಯಲ್ಪಟ್ಟಿದೆ.

'ಕೊಡಗು' ಕಂಪೆನಿಯ ಡೈರೆಕ್ಟರುಗಳ ಎಂಟಿಗೊಂದು ಈ ತಾ. 11ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು.

ಈ ವಾರ ಮಡಿಕೇರಿಯ ಬಾಣೆಮೊಟ್ಟೆಯಲ್ಲಿ ಇಬ್ಬರಿಗೆ ಪ್ಲೇಗು ಅಂಟಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ಕೊಡಗು ಟೆರಿಟೋರಿಯಲ್ ಪಟಲಾಮಿಗೆ ಹೊಸದಾಗಿ ಸೇರಿಸಲ್ಪಟ್ಟಿರುವವರ ತರಬೇತು ಈ ತಾ. 9 ರಲ್ಲಿ ಮಡಿಕೇರಿಯಲ್ಲಿ ಪ್ರಾರಂಭವಾಗಿದೆ.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಯೊಂದಕ್ಕೆ ರೂ. 41 ಮತ್ತು ಮಡಿಕೇರಿಯಲ್ಲಿ ಕಾಫಿ ಖಂಡಿಗೆ ರೂ. 127 ಕ್ರಯವಿತ್ತೆಂದು ತಿಳಿಯಬರುತ್ತದೆ.

ಪ್ರಸಿದ್ಧ ಪ್ರೊಫೆಸರ್ ಟಿ ಯಂ. ಶ್ರೀನಿವಾಸಾಚಾರ್ಯರು ಈ ತಾ. 11 ಮತ್ತು 12ರಲ್ಲಿ ಮಡಿಕೇರಿ ಹೈಸ್ಕೂಲಿನ ಹಾಲ್‌ನಲ್ಲಿ ತಮ್ಮ ಮೂಯೋ ಯಕ್ಷಿಗಾನ ವಿದ್ಯೆಯನ್ನು ಪ್ರದರ್ಶಿಸಿದರು.

ಶ್ರೀಮತಿ ಕಮಲ ನೆಹರುರವರ ಮರಣಕ್ಕೆ ದುಃಖ ಸೂಚನೆ ಮಾಡಲು ಹಿಂದೂ ದೇಶದ ಬೇರೆಲ್ಲಾ ಕಡೆಗಳಲ್ಲಿ ನಡೆಸಿದಂತೆ ಈ ತಾ. 11ರಲ್ಲಿ ವೀರಾಜಪೇಟೆಯಲ್ಲೂ ಸಂತಾಪಕ ಸಾರ್ವಜನಿಕ ಸಭೆಯೊಂದು ನಡೆಸಲ್ಪಟ್ಟಿತು.

ಡಿ. ಪಿ ಡಬ್ಲ್ಯೂ. ಹೆಡ್ಡಾಫೀಸಿನ ರಿಟಯರ್ಡ್ ಹೆಡ್ ಕ್ಲಾರ್ಕರಾದ ಮೆ. ಪದ್ಮನಾಭ ಮೊದಲಿಯಾರವರ ಎಂಗ ಸುಬ್ರಹ್ಮಣ್ಯ ಮೊದಲಿಯಾರವರು ಈ ತಾ 12ರ ಮಧ್ಯಾಹ್ನ ಮಡಿಕೇರಿ ಪಂಪು ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿಯಬರುತ್ತದೆ.

ಮಡಿಕೇರಿ ಸಿವಿಲ್ ಆಸ್ಪತ್ರೆಯ ಜಾರ್ಜಿನಲ್ಲಿದ್ದ ಮೆ. ಕೋದಂಡ ಕಾರ್ಯಪ್ಪ ಎಲ್. ಯಂ. ಪಿ ಯವರು ಮಲೇರಿಯಾ ಜ್ವರದ ವಿಷಯ ಹೆಚ್ಚಿನ ಸೂಹಿತಿ ಪಡೆಯಲು 6 ವಾರಗಳ ಮಟ್ಟಿಗೆ ಪಂಜಾಬಿನ ಕರ್ನಾಲಿಗೆ ಈ ತಾರೀಕು 10 ರಲ್ಲಿ ಕಳುಹಿಸಲ್ಪಟ್ಟಿರುವರು. ಇವರ ಸ್ಥಳಕ್ಕೆ ಡಾಕ್ಟರ್ ಮಂಜಪ್ಪನವರೂ, ಮಂಜಪ್ಪನವರ ಬದಲಿಗೆ ಮೆ. ಮೂಡೆರ ಐಯ್ಯಪ್ಪನವರೂ ನೇಮಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ಹಿಂದೂದೇಶ.

ವೋರ್ ಬಂದಂದಲ್ಲಿ ಹೆಣ್ಣು ಮಕ್ಕಳಿಗೊಂದು ಕನ್ಯಾ ಗುರುಕುಲವನ್ನು ಸ್ಥಾಪಿಸಲು ಸೇಟ್ ನಾನ್ದಿ ಕಾಳಿದಾಸ ಎಂಬ ಪುಣ್ಯಾತ್ಮರು 3 ಲಕ್ಷ ರೂಪಾಯಿಗಳನ್ನು ದಾನಮಾಡಿದ್ದಾರೆ

ಯೂನಿವರ್ಸಿಟಿ ಸ್ಟೂಡೆಂಟ್ಸ್ ಯೂನಿಯನಿನ ಪ್ರೆಸಿಡೆಂಟರನ್ನು ಹೊರಹಾಕಿದುದಕ್ಕೆ ರಂಗೂನ್ ಯೂನಿವರ್ಸಿಟಿ ಕಾಲೇಜಿನ 1,000 ಕ್ಕೆ ಮೇಲ್ಪಟ್ಟು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಮುಷ್ಕರ ಹಿಡಿದಿರುವರು.

ಬರೋಡಾ ಸಂಸ್ಥಾನಕ್ಕೆ ಸೇರಿದ ವಿಜಾಪೂರಾ ತಾಲೋಕು ಉಲಕ ಎಂಬ ಹಳ್ಳಿಯಲ್ಲಿ ಒಬ್ಬ ಹೆಂಗಸು ಏಕಕಾಲದಲ್ಲಿ ಇಬ್ಬರು ಗಂಡು ಮಕ್ಕಳನ್ನು, ಐದು ಮಂದಿ ಹೆಣ್ಣು ಮಕ್ಕಳನ್ನೂ ಹೆತ್ತಿರುತ್ತಾಳೆಂಬ ಅಪರೂಪ ಸುದ್ದಿ ಪ್ರಕಟವಾಗಿದೆ.

ಕ್ವೆಟ್ಟಾದ ಮೂಸ್ಟಂಗ್ ರೈಲ್ವೆ ಸ್ಟೇಶನಿನಲ್ಲಿ ಈಚಿಗೆ ಸುಮಾರು 5 ಸೆಕೆಂಡುಗಳ ವರೆಗೆ ಭಯಂಕರ ಭೂಕಂಪವುಂಟಾಯಿತು. ಆದರೆ ಪ್ರಾಣಹಾನಿಯೇನೂ ಆಗಿಲ್ಲ. ಜನರೆಲ್ಲರೂ ಗಾಬರಿಗೊಂಡು ರಾತ್ರಿಕಾಲ ಹೊರ ಅಂಗಣದಲ್ಲೇ ಮಲಗಿಕೊಳ್ಳುತ್ತಿದ್ದಾರೆ.

ಆನೆಯು ಬಹಳ ಹೆಚ್ಚು ಕಾಲ ಬದುಕುವ ಪ್ರಾಣಿ. ಇದರ ಆಯುಷ್ಯವು ಸಾಧಾರಣ 200 ವರ್ಷ. ಕಡಲಿನ ಆಮೆಗಳು ಇದಕ್ಕಿಂತ ಹೆಚ್ಚಿನ ಸಮಯ ಬದುಕುವುವು. ಇವುಗಳ ಆಯುಷ್ಯವು 300 ವರ್ಷವಂತೆ. ಮೊಸಳೆಗಳಿಗೂ ತಿಮಿಂಗಿಲಗಳಿಗೂ ಇದಕ್ಕಿಂತ ಹೆಚ್ಚಿನ ಆಯುಷ್ಯವಿದ್ದೆಯಂತೆ!

ಲಕ್ನೋ ಪ್ರಾಂತದ ಚುದ್ರಾವಳಿಯಲ್ಲಿ 400 ಮಂದಿ ಸಾಧುಗಳು, ತಮಗೆ ಆ ಗ್ರಾಮದವರು 4 ಗಾಡಿ ಕಟ್ಟಿಗೆಯನ್ನು, ರಾತ್ರಿ ಅಗ್ನಿಷ್ಟಿಕೆ ಹಾಕಲು ಕೊಡಲೊಪ್ಪಲಿಲ್ಲವೆಂದು ಸಿಟ್ಟಿಗೆದ್ದು, ಗ್ರಾಮಸ್ಥರ ಮನೆ ನಗ್ನ, ಲಾಟಿ ಮೊಡಿ, ಹೊಡೆದು ಓಡಿಸಿ, ಜಾನುವಾರುಗಳನ್ನು ಬಿಟ್ಟೋಡಿಸಿ, ಹೊಲದ ಬೆಳೆಗಳನ್ನು ನಾಶಮಾಡಿ, ಕೆಲವು ಮನೆಗಳಿಗೆ ಬೆಂಕಿ ಕೊಟ್ಟು ಪೋಲೀಸರು ಬರುವಷ್ಟರಲ್ಲಿ ಪಲಾಯನ ಮಾಡಿದ್ದಾರೆ.

ಭೂಕಂಪದಿಂದ ಕ್ವೆಟ್ಟ ನಗರದಲ್ಲಿ ಹೂತುಹೋದ ಆಸ್ತಿ ಪಾಸ್ತಿಗಳ ಪೈಕಿ ಫೆಬ್ರವರಿ ತಾ. 13ಕ್ಕೆ ಮುಗಿದ ಒಂದು ವಾರದಲ್ಲಿ 2,97,687 ರೂಪಾಯಿನಷ್ಟು ಸಾಮಾನುಗಳನ್ನೂ 1923 ಶವಗಳನ್ನೂ ತೆಗೆದಿರುತ್ತಾರೆಂದು ತಿಳಿಯುವುದು. ಅಂದರೆ ಈ ವರೆಗೆ 48,78 385 ರೂಪಾಯಿನ ಆಸ್ತಿ ಪಾಸ್ತಿಗಳೂ 6 785 ಶವಗಳೂ ದೊರೆತಂತಾಗಿದೆ. ಫೆಬ್ರವರಿ ತಾ. 13ರ ವರೆಗೆ 2,38,979 ರೂಪಾಯಿನ ಪರಿಹಾರ ಒದಗಿಸಿಕೊಡಲಾಗಿದೆಯೆಂದೂ ವರ್ತಮಾನ.

ಮಹಾತ್ಮ ಗಾಂಧಿಯವರು ಕಾಂಗ್ರೆಸ್ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರೊಂದಿಗೂಡಿ ತಾ. 8ರಲ್ಲಿ ದೇಹಲಿಯನ್ನು ಸೇರಿರುವರು.

ಕಾನ್ಪುರದಲ್ಲಿ ಪಂಡಿತ ವಿದ್ಯಾಧರರೆಂಬವರ ಮನೆಗೆ ಒಂದು ಕೋತಿಯು ನುಗ್ಗಿ ಹತ್ತು ಸಹಸ್ರಾರು ರೂಪಾಯಿಗಳ ನೋಟುಗಳನ್ನು ಹೆಕ್ಕಿತ್ತುಕೊಂಡು ಹೋಯಿತು ಆ ಕಳ್ಳ ಕೋತಿಯು ಪತ್ತೆಮಾಡುತ್ತಿದ್ದಾರೆ!

ವಿದೇಶ.

ಚಕ್ರವರ್ತಿ ಎಡ್ವರ್ಡರು ನೌಕಾ ಉಡುಪನ್ನು ಧರಿಸಿದ ಚಿತ್ರವುಳ್ಳ ಹೊಸ ಸ್ಟಾಂಪುಗಳು ಇದೇ ವರ್ಷದ ಅಂತ್ಯದೊಳಗೆ ನಮ್ಮ ಸಾಮ್ರಾಜ್ಯದಲ್ಲಿ ಪ್ರಚಾರಕ್ಕೆ ಬರುವಂತೆ ಏರ್ಪಾಡುಗಳಾಗಿವೆ.

ಮಾಚಿ ತಾ. 5ಕ್ಕೆ ಮುಗಿದ ಒಂದು ವಾರದಲ್ಲಿ ಗ್ರೇಟ್ ಬ್ರಿಟನಿನ ರಸ್ತೆಗಳಲ್ಲಿ ವಾಹನಾದಿಗಳಿಗೆ ಸಿಕ್ಕಿ 112 ಜನರು ಅಕಾಲ ಮರಣ ಹೊಂದಿದರೆಂದೂ, 3,268 ಮಂದಿಗೆ ಗಾಯಗಳಾದುವುವೆಂದೂ ಪ್ರಕಟವಾಗಿದೆ.

ಚೀನಾ ಸರ್ಕಾರದವರು ತಮ್ಮ ರಾಜ್ಯದಲ್ಲಿರುವ 18 ವರ್ಷಕ್ಕೆ ಮೇಲ್ಪಟ್ಟು 45 ವರ್ಷದೊಳಗಿರುವ ಪ್ರತಿಯೊಬ್ಬ ದೃಢ ಕಾಯಸ್ಥನೂ ಮಿಲಿಟರಿ ಶಿಕ್ಷಣವನ್ನು ಎರಡು ವರ್ಷಗಳ ಕಾಲ ಪಡೆಯತಕ್ಕದ್ದೆಂದು ಪ್ರಕಟಣೆ ಮಾಡಿರುತ್ತಾರೆ.

ರಷ್ಯಾ-ಜಪಾನ್-ಗಳೊಳಗೆ ಸದ್ಯದಲ್ಲೇ ಭೀಷಣ ಯುದ್ಧವಾಗುವುದೇ? ಅಲ್ಲದಿದ್ದರೆ ಸೋವಿಯೆಟ್-ಮಂಚಕಾವೋ ಗಡಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಯುದ್ಧದ ಸಿದ್ಧತೆಗಳು ನಡೆಯುತ್ತಿರುವುದೇ?—ಹೀಗೆಂಬ ತರ್ಕವೆದ್ದಿದೆ. ಆಮದರಿಂದ ಇವುಗಳೊಳಗೆ ಫಕ್ಕನೆ ಯುದ್ಧ ಆರಂಭವಾದರೆ ಆಶ್ಚರ್ಯವೇನೂ ಇಲ್ಲ.

ಜನಾಂಗ ಸಂಯೋಜನದ ಕೂಟದವರು ಅಬಿಸೀನಿಯಾ ಸರ್ಕಾರದವರಿಗೆ ಪ್ರಥಮ ಚಿಕ್ಕಿತ್ಸಾ (ಅಂಬ್ಯುಲೆನ್ಸ್) ಕಾರ್ಯಗಳಿಗೆ ನೆರವಾಗುವಂಥ 2,000 ಪವುಂಡ್ ಬೆಲೆಯುಳ್ಳ ಒಂದು ವಿಮಾನವನ್ನು ಬಹುಮಾನವಾಗಿ ಕೊಟ್ಟಿದ್ದರು. ಈ ವಿಮಾನವು ಅಂತರ್ಕ್ಷದಲ್ಲಿ ಹಾರಿದ ಮೊದಲನೇ ಸಾರಿಯೇ ಅಕಸ್ಮಿತ ಸಂಭವಿಸಿ ಮುರಿದು ಹೋಗಿರುತ್ತದೆ.

ಜರ್ಮನಿಯ ಪ್ರಧಾನ ನಗರವಾದ ಬರ್ಲಿನಿನಲ್ಲಿ ಒಂದು ವಿಚಿತ್ರವಾದ ಗಡಿಯಾರವಿದೆ. ಇದರಲ್ಲಿ ಪ್ರತಿಯೊಂದು 5 ನಿಮಿಷಗಳಿಗೂ ಜರ್ಮನ್ ರಾಷ್ಟ್ರದಲ್ಲಿ ಎಷ್ಟೆಷ್ಟು ಜನರು ಸತ್ತಿರುವರು, ಎಷ್ಟೆಷ್ಟು ಜನರು ಹುಟ್ಟಿರುವರು ಎಂಬುವುದನ್ನು ಸೂಚಿಸುತ್ತಿರುವುದು. ಇದರಿಂದ ದೇಶದಲ್ಲಿ ಜನನ ಸಂಖ್ಯೆಯು ಎಷ್ಟರ ಮಟ್ಟಿಗೆ ಕಡಿಮೆಯಾಗಿದೆಯೆಂಬುವುದು ಜನರಿಗೆಲ್ಲಾ ಗೊತ್ತಾಗುವುದು.

ಈಜಿಪ್ಟಿನಲ್ಲಿ ಇಟಲಿಗೂ, ಮುಸಲೋನಿಗೂ ವಿರೋಧವಾದ ಬಲವಳ ನಡೆಯುತ್ತಿ, ಆ ಕುರಿತಾದ ಪ್ರಚಾರ ಕಾರ್ಯ ಒಲವಾಗಿದೆ. ಈಜಿಪ್ಟಿನ ಸಂಪೂರ್ಣ ಸಹಾನುಭೂತಿ ಅಬಿಸೀನಿಯಾದ ಕಡೆಗಿದ್ದು, ಈಜಿಪ್ಟಿನ ಇಟಲಿ ನಿವಾಸಿಗಳು ಯುದ್ಧದ ಸಹಾಯಕ್ಕಾಗಿ ಭಂಗಾರದ ಉಂಗುರಗಳನ್ನು ಮುಸಲೋನಿಯವರು ಅಪೇಕ್ಷಿಸಿದರೂ ಅವರು ಕೊಡದೆ ತಿರಸ್ಕರಿಸಿದರೆಂದು ಪ್ರಕಟವಾಗಿದೆ

ಜರ್ಮನಿಯವರು ವಾಯು ಮಂಡಲದಲ್ಲಿ ಸಂಚರಿಸುವ ಒಂದು ಭಾರಿ ಜಿಪ್ಪಿನ್ ಎಂಬ ವಿಮಾನವನ್ನು ರಚಿಸಿರುತ್ತಾರೆ. ಅದರೊಳಗೆ 50 ಮಂದಿ ಪ್ರಯಾಣಿಕರಿಗೂ, 40 ಮಂದಿ ಯಂತ್ರದ ಕೆಲಸಗಾರರಿಗೂ ಸಾಕಾಗುವಷ್ಟು ಸ್ಥಳ ವಸತಿ ಕಲ್ಪಿಸಲಾಗಿದೆ. ಊಟ ಉಪಚಾರಗಳಿಗೆ ಹೊಟೇಲು, ವಿಶ್ರಾಂತಿ ಭವನಗಳೂ ಅದರಲ್ಲಿಯೇ ಏರ್ಪಡಿಸಲಾಗಿವೆ. ಇದು ವರೆಗೆ ತಯಾರಿಸಿರುವ ಜಪ್ಪಿನ್‌ಗಳ ಪೈಕಿ ಇದೇ ಬಹಳ ದೊಡ್ಡದೆಂದು ಹೇಳಲಾಗಿದೆ.

ಗ್ರೇಟ್ ಬ್ರಿಟನ್ನಿನ 1936ನೇ ಸಾಲಿನ ನೌಕಾ ಬಲದ ಖರ್ಚು ವೆಚ್ಚಗಳ ಅಂದಾಜು ಪಟ್ಟಿಗಳು ಕಳೆದ ವಾರ ಪ್ರಕಟವಾದವು ಈ ಸಾಲಿನಲ್ಲಿ 6,99.30,000 ಪೌಂಡಿನ ಅಂದಾಜು ಖರ್ಚು ಮಾಡಲಾಗಿದೆ. ಇದು ಕಳೆದ ಸಾಲಿನಲ್ಲಿ ಖರ್ಚು ಮಾಡಿದುದಕ್ಕಿಂತಲೂ 98,80,000 ಪೌಂಡು ಹೆಚ್ಚಾಗಿದೆ. 4,613 ಜನರನ್ನು ನೌಕಾ ಸೈನ್ಯಕ್ಕೆ ಹೊಸದಾಗಿ ಸೇರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಸಾಲಿನಲ್ಲಿ ಭೂ ಸೈನ್ಯದ ಬಲವನ್ನು ಹೆಚ್ಚಿಸುವುದಕ್ಕಾಗಿ 4,92,81,000 ಪೌಂಡಿನ ಖರ್ಚು ಅಂದಾಜು ಮಾಡಲಾಗಿದೆ. ಇದು ಕಳೆದ ಸಾಲಿನ ವೆಚ್ಚಕ್ಕಿಂತಲೂ 57,31,000 ಪವುಂಡು ಹೆಚ್ಚಾಗಿದೆ. ಇಟಲಿ-ಅಬಿಸೀನಿಯಾ ನೈಮನಸಿನ ಪರಿಣಾಮವಾಗಿ ಸೈನ್ಯದ ವಿಶೇಷ ಖರ್ಚು ವೆಚ್ಚಗಳಿಗೆ 15,50,000 ಪವುಂಡಿನ ಅಂದಾಜು ಪ್ರತ್ಯೇಕವಾಗಿ ತಯಾರಾಗಿದೆ. ವಿಮಾನ ಸೈನ್ಯದ ಖರ್ಚಿಗೆ 4,34,90,600 ಪವುಂಡಿನ ಅಂದಾಜು ತಯಾರಾಗಿದೆ. ಇದು ಹಿಂದಿನ ಸಾಲಿಗಿಂತಲೂ 1 24 88,500 ಪವುಂಡು ಹೆಚ್ಚಾಗಿದೆಯೆಂದು ಹೇಳಲಾಗಿದೆ.

ಒಬ್ಬ ಹೆಂಗಸು 9 ಜನ ಹೆಂಗಸರನ್ನೇ ಮದುವೆಯಾಗಿದ್ದಾಳೆ ಅವಳನ್ನು ಬಹು 'ಪತ್ನಿ' ಗಳ ಅಪಾದನೆಯ ಮೇಲೆ ಈಗ ದಸ್ತಗಿರಿ ಮಾಡಿದ್ದಾರೆ. ಈ ಹೆಂಗಸು 42 ವಯಸಿನ ವಳು. ಜವಾರಿಕೆನಾ ಎಂಬ ಹೆಸರಿನವಳು. ಗುಜರಾತಿನ ಉಡುಪನ್ನು ಧರಿಸಿಕೊಂಡವಳು. 9 ಜನ ಸ್ತ್ರೀಯರನ್ನು ಒಬ್ಬರಿಗೊಬ್ಬರಿಗೆ ತಿಳಿಯದಂತೆ ಮದುವೆಯಾದಳು. ಪ್ರತಿಯೊಂದು ಮದವೆಯಲ್ಲಿಯೂ ಕೂಡ ಮದುವೆಯಾದ ಕಾಡಲೆ ತನ್ನ 'ಪತ್ನಿ'ಯ ಹತ್ತಿರ ಏನಾದರೂ ಕಾಣಿಟ್ಟ ಹಣವಿದ್ದಲ್ಲಿ ತೆಗೆದುಕೊಂಡು ಪರಾರಿಯಾಗುವಳು ಇದೇ ಅವಳ ಕೆಲಸ. ಕೊನೆಗೆ ಕಾಡಿವಾಕಾ ಗ್ರಾಮದಲ್ಲಿ ಆ ಗಂಡನ ವೇಷದ ಹೆಂಗಸು ಸಿಕ್ಕಿ ಬಿದ್ದಿದ್ದಾಳೆ. ತನ್ನ ಜಾತಿಗೆ ಸೇರಿದವರು 9 ಜನರನ್ನು ಮದುವೆಯಾದಳೆಂಬ ಅಪಾದನೆಯ ಮೇರೆಗೆ ಈ 42 ವಯಸ್ಸಿನ ಹೆಂಗಸನ್ನು ಕೋರ್ಟಿಗೆ ಎಳೆಯಲಾಗಿದೆ.

ಯುದ್ಧ ವಾರ್ತೆ.

ಮೊಚಿ ತಾ. 5.

ರಾಜಿ ಪ್ರಯತ್ನಗಳು.

ಎರಡು ಕಡೆಯವರೂ ಸೋಲನ್ನು ಒಪ್ಪಿಕೊಳ್ಳುವದಿಲ್ಲವಾದ್ದರಿಂದ ಅವರವರ ಶರತ್ತುಗಳ ಪ್ರಕಾರ ರಾಜಿಯಾಗಲು ಯಾವ ಅಭ್ಯಂತರವೂ ಇಲ್ಲವೆಂದು ರಾಷ್ಟ್ರಗಳ ಕೂಟದವರಿಗೆ ತಿಳಿಸಿರುವರು. ಮೊನ್ನೆ ಇಟಲಿಯವರು ಕ್ವೆವಶವಾದ ಅಬಲಿಗಿಯ ವಿಶಯದಲ್ಲಿ ಅಬಿಸೀನಿಯರು ತಿಲವೂತ್ಯ ಸಂಕೋಚಪಡುವದಿಲ್ಲವೆಂದೂ, ಅದು ಒಂದು ಮೂಲೆಯಲ್ಲಿರುವ ಪ್ರದೇಶವಾದ್ದರಿಂದ ಅದರ ಅಕ್ರಮಣದಿಂದ ಅಬಿಸೀನಿಯಾಕ್ಕೆ ಯಾವ ಬಾಧಕವಿಲ್ಲವೆಂದೂ ಅಬಿಸೀನಿಯಾ ಸರಕಾರವು ಪ್ರಕಟಣೆ. 13 ಮಂದಿಯ ಸಮಿತಿಯ ತೀರ್ಮಾನದ ಶರತ್ತುಗಳ ಮೇರೆ ಅಬಿಸೀನಿಯಾವ ರಾಜಿಗೆ ಒಪ್ಪುತ್ತದೆಯೆಂದು ಒಂದು ಪ್ರಬಲವಾದ ಅಧಿಕಾರಯುಕ್ತ ವಾರ್ತೆಯಿದೆ. ಆದರೆ ಇಟಲಿಯು ತನ್ನ ಕೇಳಿಕೆಯನ್ನು ಒಂದಿಷ್ಟು ಬದಲು ಮಾಡಿರುವದಿಲ್ಲ.

ಬ್ರಿಟಿಷ್ ರೆಡ್‌ಕ್ರಾಸ್ ಮೇಲೆ ಬಾಂಬು.

ಕೊರಿಂ ಬಳಿ ಬ್ರಿಟಿಷ್ ರೆಡ್‌ಕ್ರಾಸ್ ಸಂಸ್ಥೆಯ ಮೇಲೆ ಇಟಲಿಯ ವಿಮಾನಗಳು 40 ಬಾಂಬುಗಳನ್ನು ಹಾಕಿ ಧಾಳಿಗೈದವು. ಆ ಕಟ್ಟಡಕ್ಕೆ 40 ಗಜದ ರೆಡ್‌ಕ್ರಾಸ್ ಸತಾಕೆಯನ್ನು ಹಚ್ಚಿದ್ದರೂ ಕೂಡ ಇಟಲಿಯ ವಿಮಾನವು ಬಹು ಸವಿಪಕ್ಕೆ ಬಂದು ಬಾಂಬು ಎಸೆದಿರುವದೆಂದೂ, ಒಟ್ಟು 7 ಮಂದಿ ಕಾಯಿಲಸ್ಥರು ಬಾಂಬಿನ ಪೆಟ್ಟಿನಿಂದ ಮೃತರಾದರೆಂದೂ ತಿಳಿಯಬಂದಿದೆ. ಈ ವಿಷಯದ ಪೂರ್ತಾರು ರಾಷ್ಟ್ರಗಳ ಕೂಟಕ್ಕೆ ಹೋಗಿದೆಯೆಂದು ತಿಳಿಯ ಬಂದಿದೆ.

ಇಟಲಿಯವರ ಜವಾಬು.

ಇಟಲಿಯ ವಿಮಾನಗಳು ಕೊರಿಂ ಬಳಿಯ ಗುಡಾರಗಳನ್ನು ಪರೀಕ್ಷಿಸಲು ಸವಿಪಿಸುತ್ತಿದ್ದಾಗ ಗುಡಾರಗಳಿಂದ ಗುಂಡು ಹಾರಿಸಲ್ಪಟ್ಟವೆಂದೂ, ಆಗ್ಯೆ ವಿಮಾನದಿಂದ ಬಾಂಬು ಎಸೆಯಲಾಯಿತೆಂದೂ ಬಾಂಬಿನ ಸ್ಫೋಟನವಾದ ಕ್ಷಣ ಕಪ್ಪು ಹೊಗೆಯು ದಟ್ಟವಾಗಿ ಮೇಲೇಂತೆದೂ, ಇದರಿಂದ ಅಲ್ಲಿ ಗುಂಡಿನ ಸಾಮಾನುಗಳು ಸಂಗ್ರಹಿಸಲ್ಪಟ್ಟಿದ್ದವೆಂದೂ ಇಟಲಿಯವರು ಉತ್ತರವಿತ್ತಿರುವರು.

ಮಾರ್ಚ್ ತಾ. 6.

ರಾಜಧಾನಿಯ ಮೇಲೆ ಇಟಲಿಯ ವಿಮಾನ.

ಅಬಿಸೀನಿಯಾದ ರಾಜಧಾನಿಯಾದ ಅಡ್ಡೀಸ್ ಅಬಾಬದ ಮೇಲೆ 7000 ಅಡಿ ಎತ್ತರದಲ್ಲಿ ಒಂದು ಇಟಲಿ ವಿಮಾನವು ಪಟ್ಟಣದ ಸುತ್ತ ಸುತ್ತು ಹಾರುತ್ತಿದ್ದಾಗ್ಯೆ ರಾಜಧಾನಿಯಿಂದ ಮೆಶಿನು ಗನ್ನುಗಳ ಗುಂಡುಗಳು ಹಾರಿಸಲ್ಪಟ್ಟವು. ಕೆಲ ಸಮಯದ ನಂತರ ಆ ವಿಮಾನವು ತನ್ನಷ್ಟಕ್ಕೆ ಬಾಂಬ ದಾರಿ ಹಿಡಿದು ಹೋಯಿತು. ಆದರೆ ಇದರಿಂದ ಅನೇಕ ಸಂಶಯಕ್ಕೆ ಕಾರಣಗಳು ಹೊಳೆತಿವೆ. ರಾಜಧಾನಿಯ ಪುರಜನರೆಲ್ಲರೂ ಸಮಧಾನಚಿತ್ತದಿಂದಿದ್ದರು.

ಚಕ್ರವರ್ತಿಗಳನ್ನು ಕುರಿತು ಸುಳ್ಳು ವಾರ್ತೆ.

ಈ ಮೊದಲು ಚಕ್ರವರ್ತಿಗಳು ಘೋಯಗೊಂಡಿರುವರೆಂದು ಪ್ರಕಟವಾದ ವಾರ್ತೆಯು ಪೂರಾ ಸುಳ್ಳೆಂದು ತಿಳಿಯಲಾಗಿದೆ.

ಮೊಚಿ ತಾ. 7.

ಇಟಲಿಯೂ ರಾಜಿಗೆ ಒಪ್ಪುವಂತಿದೆ.

13 ಮಂದಿಯ ಸಮಿತಿಯು ರಾಜಿ ಪ್ರಸ್ತಾಪವನ್ನು ಸೂಚಿಸಿದ ಮೇರೆ ರಾಜಿ ಕಾರ್ಯಗಳನ್ನು ಕುರಿತು ಮುಂದಕ್ಕಾಲೋಚಿಸಲು ಮತ್ತೆ ಇಟಲಿಯೂ ಸಮ್ಮತಿಯನ್ನಿತ್ತಿರುವದೆಂದು ತಿ

ಳಿದು ಬಂದಿದೆ. ಈ ಸಮಿತಿಯು ಮಾರ್ಚ್ 11 ರಿಂದ ಕಾರ್ಯವನ್ನು ಪ್ರಾರಂಭಿಸುವದು.

ಮಾರ್ಚ್ ತಾ. 8.

ರಾಸ್ ಮುಲುಗೇಟರವರ ಮರಣ.

ಯುದ್ಧ ಮಂತ್ರಿಗಳಾಗಿದ್ದ 70 ವರ್ಷದ ವೃದ್ಧ ಸೇನಾಪತಿಗಳಾದ ರಾಸ್ ಮುಲುಗೇಟರವರು ನಿವೋನಿಯಾ ಕಾಯಿಲೆಯಿಂದ ಮೃತರಾದರೆಂದು ತಿಳಿದುಬಂದಿದೆ. ಇವರು ಉತ್ತರ ರಣರಂಗದ ಸೇನಾಧಿಪತಿಯಾಗಿದ್ದರು.

ಯುದ್ಧವನ್ನು ನಿಲ್ಲಿಸಿದರು.

ಮುಂದು ಆಗುವ ರಾಜಿ ಪ್ರಸ್ತಾಪಗಳ ಕಾರಣದಿಂದ ಇಟಲಿಯು ಅಬಿಸೀನಿಯಾ ಯುದ್ಧವನ್ನು ತತ್ಕಾಲಕ್ಕೆ ನಿಲ್ಲಿಸಲು ಅಪ್ಪಣೆ ಕೊಡಿಸಿರುವದಾಗಿ ತಿಳಿದು ಬಂದಿದೆ ಹೊರಗೆ ಹೋದ ಅನೇಕ ವಿಮಾನಗಳಿಗೆ ಒಡನೆ ಹಿಂತಿರುಗುವಂತೆ ಅಪ್ಪಣೆಯಾಯಿತು. ಸೈನ್ಯದಲ್ಲಿ ಅತೀ ಆನಂದವುಂಟಾಗಿದೆಯೆಂತೆ.

ಮಾರ್ಚ್ ತಾ. 9.

ರಾಜಿ ಪ್ರಸ್ತಾಪ ಮುರಿಯಿತು.

ಇಟಲಿಯ ವಿಮಾನಗಳು ಪುನಃ ತಮ್ಮ ಧಾಳಿಯನ್ನು ಕೈಕೊಂಡಿವೆ.

ರೆಡ್ ಕ್ರಾಸ್ ಮೇಲೆ ಪುನಃ ಬಾಂಬು.

ಇಟಲಿ ವಿಮಾನಗಳು ಕೊರೆಂ ಒಳಿಯ ಬ್ರಿಟಿಷ್ ರೆಡ್ ಕ್ರಾಸ್ ಕಟ್ಟಡದ ಮೇಲೆ ಪುನಃ ಬಾಂಬೆಸೆದು ಉಳಿದ ಅಲ್ಪ ಸ್ವಲ್ಪವನ್ನೆಲ್ಲ ಧ್ವಂಸಮಾಡಿರುವದಾಗಿಯೂ, ಬ್ರಿಟಿಷ್ ರೆಡ್ ಕ್ರಾಸ್ ಸಂಸ್ಥೆಯವರು ಈ ವಿಷಯದಲ್ಲಿ ಬಹಳವಾಗಿ ಪ್ರತಿಭಟಿಸಿರುವರೆಂದೂ ತಿಳಿಯಲಾಗಿದೆ

ಅಡೀಸ್ ಅಬಾಬದಲ್ಲಿ ಗಲಭೆ

ಎಲ್ಲಾದರೂ ಇಟಲಿ ವಿಮಾನಗಳು ರಾಜಧಾನಿಯ ಕಡೆ ಬಂದಲ್ಲಿ ಒಡನೆ ತಿಳಿಸಬೇಕೆಂದು ಅಲ್ಲಲ್ಲಿ ದಳಗಳ ಕಾವಲಿಡಲ್ಪಟ್ಟಿರುತ್ತೆ. ಅದರಂತೆಯೇ ಎರಡು ವಿಮಾನಗಳು ಬಂದವೆಂಬ ವಾರ್ತೆಯು ತಪ್ಪಿಸಿಕೊಡನೆಯೇ ಅಡೀಸ್ ಅಬಾಬದಲ್ಲಿ ಬಹಳ ಗಲಭೆಯಾಯಿತು. ಕ್ಷಣಾರ್ಧದಲ್ಲಿ ಪುರಜನರಾಸಿಗಳು ಪಟ್ಟಣವನ್ನು ಬಿಟ್ಟರು. ಚೌಕಿಗಳಲ್ಲಿ ವಿಮಾನಗಳಿಗೆ ಗುಂಡು ಹೊಡೆವ ತೋಪುಗಳು ಸಜ್ಜಾದವು. ಆದರೆ ವಿಮಾನಗಳು ಬರಲೇ ಇಲ್ಲ. ಆದರೆ ಆ ವಿಮಾನಗಳು ಹಳೇ ರಾಜಧಾನಿಯಾದ ಎಗ್ಗಾಸಲವ್ ಎಂಬಲ್ಲಿಗೆ 14 ಬಾಂಬುಗಳನ್ನು ಹಾಕಿ ಹಾರಿ ಹೋದವು

ಮಾರ್ಚ್ ತಾ. 10.

ಯುದ್ಧವು ನಿಲ್ಲುವಂತಿಲ್ಲ.

ಯುದ್ಧವು ನಿಲ್ಲಿಸಲ್ಪಟ್ಟು ರಾಜಿ ಪ್ರಸ್ತಾಪಗಳು ಮುಂದು ಸಾಗುವವೆಂಬ ವಾರ್ತೆಗಳು ತೀರಾ ಸುಳ್ಳೆಂದು ರೋಮಿನಿಂದ ಪ್ರಕಟವಾಗಿದೆ. ಇಟಲಿಯ 3000 ಕಪ್ಪಂಗಿಗಳು ಆಫ್ರಿಕಾ ರಣರಂಗಕ್ಕೆ ಕಳುಹಿಸಲ್ಪಟ್ಟಿರುವರು. ಶೀಘ್ರದಲ್ಲೇ ಇನ್ನೂ ಕಳುಹಿಸಲ್ಪಡುವುದಂತೆ ಹಾಗೂ ಯುದ್ಧ ಕಾರ್ಯಗಳನ್ನು ತ್ವರೆಯಿಂದ ಮುಂದೊತ್ತಬೇಕೆಂದು ಇಟಲಿಯ ನಾಯಕರು ಅಭಿಪ್ರಾಯಪಡುತ್ತಿರುವರು.

ಬೊಂಬಾಯಿ ಕೊಡಗು ಸಂಘ.

ಮೇಲಿನ ಸಂಘದ 15ನೇ ವಾರ್ಷಿಕ ಮಹೋತ್ಸವವು ಇದೇ ತಾರೀಕು 1ನೇ ರವಿವಾರ ಮೆ. ಕೆ. ಎ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಂದರ್ಭದಲ್ಲಿ ಬೊಂಬಾಯಿ ಪಟ್ಟಣಕ್ಕೆ ಕುಡಿಯಲು ನೀರನ್ನು ಒದಗಿಸುವ ಮುಖ್ಯವಾದ ಸರೋವರಗಳಲ್ಲಿ ಒಂದಾದ ಬೊಂಬಾಯಿಯಿಂದ ಸುಮಾರು 15 ಮೈಲು ದೂರವಿರುವ ವಿಹಾರ್ ಸರೋವರಕ್ಕೆ ಒಂದು 'ಪಿಕ್‌ನಿಕ್' ಪಾರ್ಟಿಯು ಏರ್ಪಡಿಸಲ್ಪಟ್ಟಿತು. ಸುಮಾರು 25 ಸದಸ್ಯರುಗಳು ಹಾಜರಿದ್ದರು.

ಸರೋವರದ ಪಡಕ್ಕೆ ಸದಸ್ಯರುಗಳೆಲ್ಲರೂ ಮಧ್ಯಾಹ್ನ 11 ಗಂಟೆಗೆ ತಲಪಿ ಒಂದೆರಡು ತಾಸು ಆಟವಿನೋದಗಳಿಂದ ಸಮಯವನ್ನು ಕಳೆದರು. ತದನಂತರ ಎಲ್ಲರೂ ಮಧ್ಯಾಹ್ನದ ಊಟವನ್ನು ಮುಗಿಸಿಕೊಂಡು 3 ಗಂಟೆಗೆ ಏಟಿಂಗಿಗೆ ಕೂಡಿದರು. ಆದಿಯಲ್ಲಿ ಸಂಘದ ಕಾರ್ಯದರ್ಶಿಯವರು ವಾರ್ಷಿಕ ವರದಿಯನ್ನು ಓದಿ ಸಂಘದ ಮುಂದಿಟ್ಟರು. ಸದಸ್ಯರುಗಳ ಅಭಿಪ್ರಾಯದ ಮೇರೆ ವರದಿಯು ಕೆಲವು ಬದಲಾವಣೆಯುನ್ನೊಳಗೆಗೊಂಡು ಒಪ್ಪಲ್ಪಟ್ಟಿತು. 1935 ನೇ ವರ್ಷದ ಅಂತ್ಯದಲ್ಲಿ ಸಂಘದ ಜಮೆಯು ರೂ. 210 ಎಂದು ವರದಿಯಲ್ಲಿ ತಿಳಿಸಲ್ಪಟ್ಟಿತ್ತು.

ಆ ಮೇಲೆ ~~1936 ನೇ ವರ್ಷಕ್ಕೆ~~ ಈ ಕೆಳಗಿನ ಮಹನೀಯರುಗಳು ಹೊಸ ಕಾರ್ಯ ಮಂಡಳಿಯ ಸದಸ್ಯರುಗಳಾಗಿ ಆರಿಸಲ್ಪಟ್ಟರು.

ಮೆ. ಗಳಾದ ಯಂ. ಯಸ್: ಮುತ್ತಣ್ಣನವರು, (ಅಧ್ಯಕ್ಷರು) ಪಿ ಪಿ ಕಾರುಂಬಯ್ಯನವರು (ಕಾರ್ಯದರ್ಶಿ) ಯಂ. ಪಿ ಬೆಳ್ಯಪ್ಪನವರು (ಖಜಾಂಚಿ). ಕಮಿಟಿ ಮೆಂಬರುಗಳಾಗಿ ಎಸ್ ಪಿ. ಮಾಚಯ್ಯನವರು, ಮೆ. ಗಳಾದ ಬಿ. ಸಿ. ಸೋಮಯ್ಯನವರು ಮತ್ತು ಯಸ್. ಯಸ್. ಉತ್ತಯ್ಯನವರನ್ನೂ ಆರಿಸಲಾಯಿತು.

ಆ ಮೇಲೆ ಅಧ್ಯಕ್ಷರ ಅನುಮತಿ ಮೇರೆ ಸದಸ್ಯರುಗಳು ಒಂದೆರಡು ಸೂಚನೆಗಳನ್ನು ಸಭಿಕರ ಮುಂದಿಟ್ಟರು. ನ್ಯಾಯವಾಗಿ ಸಂಘಕ್ಕೆ ಒಂದು ಖಾಯಂ ವಿಳಾಸವಬೇಕೆಂದು ಮೆ. ಯಂ. ಯಸ್. ಮುತ್ತಣ್ಣನವರು ಸೂಚಿಸಿದರು. ಸದ್ಯಕ್ಕೆ ಸಂಘದ ಕಾರ್ಯದರ್ಶಿಯವರ ವಿಳಾಸವು ಸಂಘದ ವಿಳಾಸವಾಗಿ ನಿಶ್ಚಯಿಸಲ್ಪಟ್ಟಿತು. ಮೆ. ಎ. ಸದಾಶಿವರಾವ್‌ರವರು ಸಂಘದ ವಾರ್ಷಿಕ ಚಂದಾ ಹಣವನ್ನು ರೂ 4 ರಿಂದ 3 ಕ್ಕೆ ಇಳಿಸಬೇಕೆಂದು ಸೂಚಿಸಿದರು. ಈ ವಿಷಯ ಕೆಲವು ಚರ್ಚೆಯಾದ ನಂತರ ಸೂಚನೆಯು ಓಟಿಗೆ ಹಾಕಲ್ಪಟ್ಟು ಬಹುಮತದಿಂದ ಮಂಜೂರಾಯಿತು.

ಅಧ್ಯಕ್ಷರಲ್ಲಿ ಮೆ ಯಂ. ಬೆಳ್ಯಪ್ಪನವರು ಸಂಘದ ಪರವಾಗಿ ನಿವೃತ್ತರಾದ ಕಾರ್ಯ ಮಂಡಳಿಯವರನ್ನೂ, ಮೆ. ಯಂ. ಮುತ್ತಣ್ಣನವರು ಹೊಸ ಕಾರ್ಯ ಮಂಡಳಿಯವರ ಪರವಾಗಿ ಸಭಿಕರನ್ನೂ ವಂದಿಸಿದ ನಂತರ ಸಭೆಯು ಬರಕಾಸ್ತಾಯಿತು.

5 ಗಂಟೆಗೆ ತಿಂಡಿ ತೀರ್ಥಗಳಾದ ನಂತರ ಸದಸ್ಯರುಗಳೆಲ್ಲರೂ ಸರೋವರದಿಂದ ಸುಮಾರು 5½ ಗಂಟೆಗೆ ಬೊಂಬಾಯಿ ಪಟ್ಟಣಕ್ಕೆ ಹಿಂತಿರುಗಿದರು.

113 ಹಿಂದೂ ಕಾಲನಿ, ದಾದರ್, ಬೊಂಬಾಯಿ. — ಪಿ. ಸಿ. ಕಾರುಂಬಯ್ಯ, (ಗೌ. ಕಾರ್ಯದರ್ಶಿ.)

ನೋಟೀಸು.

ಕೂಡಿಗೇ ಗ್ರಾಮದಲ್ಲಿರುವ (1) ಬಸವರಾಜಯ್ಯ (2) ಸೋಮಾಚಾರಿ ಸಹ ಇವರಿಂದ ಸಮಸ್ತ ಜನಂಗಕ್ಕೂ ತಿಳಿಯಪಡಿಸುವುದೇನೆಂದರೆ:—

ನಮ್ಮ ದೊಡ್ಡ ತಂದೆ ಮಗನಾದ ಬಸಪ್ಪನಿಂದನು ಏಕಾತಾಗಿ ಆತನ ಹೆಂಡತಿ ಕೆಂಪಮ್ಮನೆಂಬುವಳೂ, ಸಮಾರು ಮೂರು ವರ್ಷ ಪ್ರಾಯದ ಒಂದು ಹೆಣ್ಣು ಮಗುವೂ ಸಹ ಇರುತ್ತಾರೆ.

ಇವಳು ನಮಗಳ ಪಿತ್ರಾರ್ಜಿತವಾದ ಸ್ವತ್ತನ್ನು ಯಾ ಸ್ವತ್ತಿನ ಕೆಲವು ಭಾಗಗಳನ್ನು ನಾಹಕ್ಕಾಗಿ ವ್ಯವಹಾರಮಾಡುತ್ತಾಳೆಂಬ ವರ್ತಮಾನ ತಿಳಿಯುತ್ತೇವೆ. ಹಾಗೆ ಅವಳು ಪರಭೀನ ಮಾಡಲು ನಮ್ಮ ವಿನಹಾ ಆಕೆಗೆ ಯಾವ ಅಧಿಕಾರವೂ ಇಲ್ಲವುದಿಲ್ಲ. ಇದನ್ನು ಯಾರೇ ಆಗಲಿ ಆಕೆಯಿಂದ ನಮ್ಮ ಸಮ್ಮತಿ ವಿನಹ ಗಿರ್ವಿ, ಭೋಗ್ಯ, ಕ್ರಯ ವಗೈರೆ ಮಾಡಿಸಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲವೆಂಬ ಸಂಗತಿಯನ್ನು ಈ ಮೂಲಕ ತಿಳಿಸಿರುತ್ತೇವೆ.

ಕೂಡಿಗೆ, ತಾ. 12—3—36 — ಬಸವರಾಜಯ್ಯ, ಸೋಮಾಚಾರಿ.

ಆದಿಶ್ರೀ ಕಾವೇರಿ ಬಸ್ಸ್ ಸರ್ವಿಸ್ ಲಿಮಿಟೆಡ್, ಮಡಿಕೇರಿ.

ಮೇಲ್ಕಂಡ ಕಂಪೆನಿಯಿಂದ ಶೇರು ಹೊಂದಿಕೊಂಡ ಮಹನೀಯರುಗಳು.

(ಮುಂದುವರಿದದ್ದು)

ಮೆ.	ಕಂಡ್ರತಂಡ ಚಿಣಪ್ಪನವರು	100 ಶೇರುಗಳು
,,	ಬಾಚಿಮಂಡ ಕುಟ್ಟಪ್ಪನವರು	200 ,,
,,	ಅಮ್ಮತ್ತಿರ ರಾಮಯ್ಯನವರು	1 ,,
,,	ಮೂಚಿಮಂಡ ಐಯ್ಯಂಣನವರು	1 ,,
,,	ಒಲ್ಲಚಂಡ ಜಿ. ಐಯ್ಯಂಣನವರು	5 ,,
ದಿವಾನ್ ಬಹದ್ದೂರ್ ಕೆ. ಚಂಗಪ್ಪನವರು ಬಿ.ಎ. (ರಿಟಯರ್ಡ್ ಆಫೀಶ್ಯೇಟಿಂಗ್ ಕಮಿಶನರು)		10 ,,

ಯು. ಯಂ. ಅಂಚೆಯ್ಯ, ಸೆಕ್ರೆಟರಿ.

8—5

ಅತ್ತಿಕಾನದ ಕೊಡಗು ನಿವಾಸಿಕರ ಸಭೆ.

ಕೊಡಗು ನಿವಾಸಿಕರ ವಾರ್ಷಿಕ ಸಭೆಯು ತಾ. 8 ನೇ ಆದಿತ್ಯವಾರ ಉಗನಿಕಾಟೇಜಿನಲ್ಲು ಶ್ರೀಮಾನ್ ತಾಳ್ತಮನೆ ರಘುನಾಥಯ್ಯನವರ ಅಧ್ಯಕ್ಷತೆಯಲ್ಲು ಬಹು ವಿಜೃಂಭಣೆಯಲ್ಲಾ ನಡೆಯಿತು ಸಭೆಯ ಮೆಂಬರರಲ್ಲದೆ ಇನ್ನು ಅನೇಕ ಮಹನೀಯರುಗಳು ಮತ್ತು ಕೆಲವು ಯೂರೋಪಿಯನ್‌ಗಳು ಸಹ ಹಾಜರಿದ್ದರು. ಸಭೆಗೆ ಬರಲಾರದಕ್ಕಾಗಿ ಶ್ರೀ. ಸಿ. ಕೆ. ಅಪ್ಪಚ್ಚನವರು ಕಳುಹಿಸಿದ ತುರ್ತಿಯನ್ನು ಸಭೆಯ ಮುಂದೆ ಓದಲಾಯಿತು. ನಂತರ ನಮ್ಮ ಚಕ್ರವರ್ತಿಯರ ಮರಣದ ಶೋಕ ವಾರ್ತೆಗಾಗಿ ಸಭಿಕರೆಲ್ಲರು ಒಂದು ನಿನಿಟು ಎದ್ದು ನಿಂತದ್ದಾಯಿತು. ಅಲ್ಲದೆ ಶ್ರೀಮತಿ ಕಮಲ ನೆಹರುವರ ಮರಣದಿಂದ ಹಿಂದುಸ್ಥಾನಕ್ಕೆ ಉಂಟಾದ ನಷ್ಟವನ್ನು ವರ್ಣಿಸಲಾಯಿತು. ಅಲ್ಲದೆ ಸಭೆಯಿಂದ ಶ್ರೀ ಜ. ನೆಹರುರವರಿಗೆ ಶೋಕವಾರ್ತೆಯ ತಂತಿಯನ್ನು ಕೊಡುವುದಾಗಿ ಅಧ್ಯಕ್ಷರು ತೀರ್ಮಾನಿಸಿದರು. ಸಭೆಯಲ್ಲು ಕಮಿಟಿ ಏಟಿಂಗಿನಲ್ಲು ನಡೆದ ವರದಿಗಳನ್ನು ಓದಲಾಯಿತು ಆ ಮೇಲೆ ಅಧ್ಯಕ್ಷರು ಕೊಡಗು ಕೌನ್ಸಿಲಿನಲ್ಲು ವಾಸಾದ ಒಡ್ಡೆಟ್ಟಿನ ವಿಷಯ ತುಂಬಾ ಮಾತನಾಡಿದರು. ಕೊಡಗು ಸರಕಾರದ ಈಗಿನ ಪರಿಸ್ಥಿತಿಯು ಬಹು ನಾಚಿಕೆತರವಾಗಿ ಕಾಣುತ್ತೆ. ಕೊಡಗನ್ನು ತಾವಾಗಿಯೇ ಬ್ರಿಟಿಷ್ ಸ

ಏಜೆಂಟರು ಬೇಕಾಗಿದೆ.

(1) ಬೊಂಬಾಯಿಯ ಪ್ರಸಿದ್ಧ ಬೆಬ್ ಕೆಮಿಕಲ್ ವರ್ಕ್ಸ್ ಇವರ "ಬೆಬುಲಿನ್" "ಹೆಮೆಟೋನ್" ಬೆಯೊಕಾರ್ಡಿಯಲ್, (2) ಹೆನ್ಸ ದಿವಾನ್ ಇವರ 'ಫೆಮೀ, ಜವ್', ಮೇರಿ,' ಬಿಸ್ಕಿಟುಗಳು, (3) ಲಸ್ಟರ ಮೆನುಫೆಕ್ಚರಿಂಗ್ ಕಂಪೆನಿಯವರ "ಲಸ್ಟರ್', ಮೇಹಧ್ವಂಸಿನಿ, ವೆಪ್ಸಿನ್, ದಂತಮಂಜನ," ಇವುಗಳನ್ನು ಮಾರಾಟಮಾಡಲು ಕೊಡಗಿನ ಮುಖ್ಯ ಪಟ್ಟಣಗಳಲ್ಲಿ ಏಜಂಟರು ಬೇಕಾಗಿರುವರು. ಕಾರ್ಯಕ್ಷಮರಾದವರು, ಶರ್ತಗಳಿಗಾಗಿಯೂ, ವಿವರಕ್ಕಾಗಿಯೂ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು:—

X,
C/o. "Kodagu" Ltd.,
Mercara.

4—1

ರಕಾರಕ್ಕಾಗಿ ಒಪ್ಪಿಸಿದ ಪ್ರತಿಫಲಕ್ಕಾಗಿ ಈಗ 'ಭಿಕ್ಷಾಂ ಭವತಿ ದೇಹಿ' ಎಂದು ಕೇಂದ್ರ ಸರಕಾರಕ್ಕೆ ಸಾಲಕ್ಕಾಗಿ ಮನವಿಮಾಡಬೇಕಾದ ಸಂದರ್ಭ ಬಂದಿರುತ್ತೆ. ಕೇಂದ್ರ ಸರಕಾರವು ತಾನೇ ಎಷ್ಟು ಸಾಲ ಕೊಡಲಾಗುತ್ತೆ? ಕೊಡಗಿನ ಒಹು ಪಕ್ಷದ ಸಂಘವಾದ ಜವಿೂನುದಾರರ ಸಂಘವು ಹಲವು ವಿಷಯಗಳಲ್ಲಿ ಕೊಡಗನ್ನು ಪ್ರತ್ಯೇಕವಾಗಿ ನಡೆಯಿಸಿ ಬರುವುದು ಕೊಡಗಿನ ಏಳಿಗೆಗೆ ಹಾನಿಯೂಗಿರುತ್ತೆ ಎಂಬ ತರಾವುಗಳನ್ನು ಮೂಲೆಗೊತ್ತಿರುತ್ತೆ. ಡ್ಯಾನ್ಸಾದವರು ವೇಶ ಒದಲಾಯಿಸಿದ ಹಾಗೆ ಕವಿಶನರುಗಳನ್ನ ದೇಶದ ಸ್ಥಿತಿಗತಿ ಗೊತ್ತಾಗುವುದಕ್ಕೆ ವೆಂದಲೇ ವರ್ಗಾವಣೆ ಮಾಡುವುದು ಸಹ ಒಂದು ತರದ ಕುಂದಕವಾಗಿರುತ್ತೆ. ಫೈನಾನ್ಸ್ ಮೆಂಬರರು ಹೇಳಿದ ಪ್ರಕಾರ ಕೊಡಗನ್ನು ಪ್ರತ್ಯೇಕ ಸರಕಾರವಾಗಿ ನಡೆಯಿಸುವದು ಬಹಳ ಕಷ್ಟವಾಗಿರುತ್ತೆ. ಆದ್ದರಿಂದ ಈ ಸಭೆಯು ಕೊಡಗನ್ನು ಮದ್ರಾಸಿಗಾಗಲಿ ಯೂ ಮೈಸೂರಿಗಾಗಲಿ ಸೇರಿಸಲು ಅಪೇಕ್ಷಿಸತ್ತದೆ. ಕೊಡಗಿನ ಆವಸ್ಥೆಯು ಇದೇ ಪ್ರಕಾರ ನಡೆಯುತ್ತಾ ಒಂದರೆ ನನ್ನ ದೇಶವು ಇತರ ಪ್ರಾಂತ್ಯಗಳಿಗೆ ಒಂದು ಜಿಗಿ ಆನೆಯೂಗಿ ಕಂಡು ಬರುವುದು ಆದ್ದರಿಂದ ಇದೀಗ ಶತ್ರುವಯವು ಎಂಬುದಾಗಿ ಅಧ್ಯಕ್ಷರು ಭಾಷಣ ಮಾಡಿದನಂತರ ತಾವು ಬಹುಮತದಿಂದ ಪಾಸಾಯಿತು.

ಮುಂದಿನ ವರ್ಷಕ್ಕೆ ಶ್ರೀವಾನ್ ಕೆ. ಚಿಂಣಪ್ಪನವರು ಕೇಳಿಕೊಂಡು ಮೆ ಸಿ. ಸುಬ್ಬಯ್ಯನವರು ಅನುವೋದಿಸಿದ ಪ್ರಕಾರ ಶ್ರೀಮಾನ್ ತಾಳ್ಳವನೆ ರಘನಾಥ ರೈಯವರನ್ನು ಅಧ್ಯಕ್ಷರಾಗಿ ನೇಮಿಸಲ್ಪಟ್ಟಿತ್ತು. ಶ್ರೀ ಕೆ. ಚಿಂಣಪ್ಪನವರು ಸೆಕ್ರೆಟರಿಯೂಗಿಯೂ ಮತ್ತು ಸಿ ರಾಮಯ್ಯನವರು ಆಡಿಟರಾಗಿಯು ನಿಗುಮಿಸಲ್ಪಟ್ಟರು. ಸದರಿ ರಾತ್ರೆ ಎಡೂರು ಮಂಗಳದ ಶಿದ್ದಗಾಡರು 'ಶಸಿರೇಕ ಕಲ್ಯಾಣ' ಎಂಬ ಹರಿಕಥೆಯನ್ನು ನಡೆಯಿಸಿ ಸಭೆಯು ಬಡಕಾಸು ಮಾಡಲಾಯಿತು.

ಡಾಕ್ಟರ್ ಫ್ರಾನ್ಸಿಸ್ ಪಿಂಟೋ
ದಂತ ವೈದ್ಯರು.

ನಿಮ್ಮ ಹಲ್ಲನ್ನು ಉಚಿತವಾಗಿ ಪರೀಕ್ಷಿಸುವರು.

ನಿಮ್ಮ ಶರೀರಕ್ಕೆ ನೋವಿಲ್ಲದಂತೆ ನಿಮ್ಮ ದಂತಕ್ಕೆ ಶಸ್ತ್ರಕ್ರಿಯೆ ನಡೆಸಿ ಹಲ್ಲು ಕೀಳುವರು, ಶುಭ್ರಪಡಿಸುವರು, ಮತ್ತು ಕೂತಗಳನ್ನು ಮುಚ್ಚುವರು. ಅಗಿಯುಮಡಿಕ್ಕೂ, ಮಾತನಾಡಲಿಕ್ಕೂ, ಸೌಂದರ್ಯಕ್ಕೂ, ಉಪಯೋಗವಾಗುವಂಥಾ, ನೋಡಲು ನಿಜವಾದಂಥಾ ಕೃತಕ ಹಲ್ಲುಗಳನ್ನು ಒಹಳ ಉತ್ತಮ ತರಗತಿಯ ಸಾಮಾನುಗಳಿಂದಲೂ ಮತ್ತು ಕೆಲಸದಿಂದಲೂ, ಮಿತವ್ಯಯದಿಂದಲೂ, ಖಾತ್ರಿಯೂಗಿ ನಿಮ್ಮ ಮನವೊಪ್ಪುವಂತೆ ಕಟ್ಟಿ ಕೊಡುವರು.

4—3 ವೀರಾಜಪೇಟೆ, (ದ. ಕೊಡಗು

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಕೂಲಿಗಾರರು ಮುಂದು ಕಾಣದಂತೆ ಆಗುವರೇ.

ಮೊನ್ನೆ ತಾನೆ ನಡೆದ ಕಾಫಿ ವ್ಯವಸಾಯಗಾರರ ಸಭೆಯಲ್ಲಿ ಕಾಫಿ ಕೆಲಸ ಮಾಡುವ ಕೂಲಿಯವರಿಗೆ ಇನ್ನು ಮುಂದಕ್ಕೆ ದಿನ ಒಂದಂ ಹೆಂಗಸಿಗೆ ಎಡೂವರೆ ಆಣೆಯಂತೆಯೂ ಮತ್ತು ಗಂಡಿಸಿಗೆ ನಾಲ್ಕಾಣೆಯಂತೆಯೂ ಕೂಲಿಯನ್ನು ಕೊಡಬೇಕೆಂದು ತೀರ್ಮಾನಿಸಿದ್ದಾರಂತೆ. ಇದು ನಿಜವಾದರೆ ಕೂಲಿಯವರು ಕಲಸ ಮಾಡಿ ತಮ್ಮ ಸಾಹುಕಾರನನ್ನು ಸಾಹುಕಾರರನ್ನಾಗಿ ಮಾಡುತ್ತಾರೆಂಬ ನಂಬಿಕೆಯನ್ನು ಸಾಹುಕಾರರು ಇಟ್ಟುಕೊಳ್ಳದೆ, ಇಷ್ಟು ಕಡಿವೆ ಸಂಬಳಕ್ಕೆ ಅವರಿಂದ ಕಲಸ ಮಾಡಿಸಿದರೆ ಅವರ ಪಾಪದ ಜೀವನವು ಹೇಗೆ ನಡೆಯಬೇಕು; ಕುಟುಂಬ ಪೋಷಣೆ ಯಾವ ರೀತಿಯಲ್ಲಿರಬೇಕು; ದಾರಿ ಖರ್ಚಿಗೇನಾಗಬೇಕು; ಎಂಬ ಸಂಗತಿಯನ್ನು ಇವರೆ ಕಡೆಯ ಮುಂದಾಳುಗಳು ಆಲೋಚಿಸಬೇಡವೆ? ಕೂಲಿಕಾರರ ಮುಂದಾಳತ್ವದ ಮಹಾತ್ಮೆ ಗತಿಯಧಿಯವರು ಕೂಲಿಯವರಿಗೆ ಹೆಚ್ಚಿನ ವಟ್ಟಿನ ಅನುಕೂಲತೆಯನ್ನು ಕೊಡಬೇಕಾದದ್ದು ನಮಗಳ ಕೆಲಸ ಅಲ್ಲದೆ ನಾವು ಅವರಿಂದ ಬೇಕಾದ ಅನುಕೂಲತೆಯನ್ನ ಪಡೆಯುವವರಾಗಿದ್ದೇವೆ ಎಂದು ಆಗಿಂದಾಗ್ಗೆ ಹೇಳುತ್ತಿರುವುದು ನ್ಯಾಯವಾಗಿದೆ ಹೀಗಿದ್ದೂ ಕಾಫಿ ತೋಟದವರು ಕೂಲಿಯವರ ಪರವಾಗಿ ತಕ್ಕಷ್ಟು ಸೌಕರ್ಯವನ್ನು ಕೊಡದಂತೆಯೋ ಎಂಬಂತೆ, ಅವರ ಕೂಲಿಯನ್ನು ಅತಿ ಕಮ್ಮಿ ಸ್ಥಿತಿಗೆ ಇಳಿಸುತ್ತಿರುವುದು ಮಹತ್ವದಾದ ತೊಂದರೆಯುಳ್ಳದಾಗಿದೆ, ಹೀಗಿರುವುದರಿಂದ ಕೂಲಿ ಪರ ಮುಂದಾಳುಗಳು ಇವರ ಅನುಕೂಲತೆ ಬಗ್ಗೆ ಒಂದು ಚಳವಳಿ ಹೂಡುವುದು ಅಗತ್ಯ ಕಾಣುತ್ತೆ. ಇಲ್ಲದಿದ್ದಲ್ಲಿ ಕೂಲಿಯವರು ಹಾಳಾಗುವರಲ್ಲದೆ ದೇಶವು ಇವರೂಡನೆ ಹಾಳಾಗುವುದರಲ್ಲಿ ಸಂಶಯವಿಲ್ಲ. ಹೇಗೆ ಧೃತನ ಅನುಕೂಲತೆಯು ದೇಶದ ಅನುಕೂಲತೆಯಲ್ಲಿ ಅಡಗಿದೆಯೋ ಹಾಗೆಯೆ ಕೂಲಿಯವರು ಇದ್ದಾರೆ. ಆದುದರಿಂದ ಇವರ ಅನುಕೂಲತೆ ಬಗ್ಗೆ ಹೆಚ್ಚಿನ ನಿಗಕೊಡುವದು ಸಮ್ಮಂದಪಟ್ಟವರ ಕೆಲಸವಾಗಿದೆ.

ಹಿತಚಿಂತಕ.

"ಅಹ! ನಿನಗೆ ಎಂಥ ಜಾಣನಾದ ಅಗಸನು ಬಟ್ಟೆಯೊಗೆಯುತ್ತಿರುವನು! ನಿನ್ನ ವಸ್ತ್ರಗಳೆಲ್ಲವು ಮನಮುಚ್ಚುವಷ್ಟು ಶುಭ್ರವಾಗಿವೆ."

"ಅಗಸನೇ? ಏನು ನನ್ನ ಈ ವಸ್ತ್ರಗಳನ್ನೆಲ್ಲವನ್ನು ನಾನೇ 501 ಸೋಪಿನ ಸಾಬೂನಿನಿಂದ ಒಗೆದೆನು."

ವೆಚ್ಚ ಕಡಿಮೆ.
ವಸ್ತ್ರ ಬಾಳಿಕೆ.
ಶ್ರಮ ಅತೀ ಕಡಮೆ!

ಟಕೆಮ್‌ಕೋ ಮೂರಾಟದ ಮಳಿಗೆ,

ಇ. ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ತಯಾರಿಸುವವರು—ತಾತಾ ಆಯಿಲ್ ಮಿಲ್ಸ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ತಾತಾಪುರ.

52—42. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ!! ಮನೋಲ್ಲಾಸಕರ!! ಶುಚಿಕರ!!! ಆದರ್ಶ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಆಧುನಿಕವೂ ಆದ ಉಪಹಾರ ಗೃಹವೊಂದನ್ನು ನಿರೀಕ್ಷಿಸುವ ಮಹನ್ನೀಯರುಗಳ ಸೌಕರ್ಯಕ್ಕಾಗಿ ತೆರೆಯಲಾಗುವುದು.

ಶುದ್ಧವೂ, ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿತಿನಿಸುಗಳನ್ನೂ

ಕಾಫಿ—ಚಹಾ—ಕೊಕ್ಕೋ—ಶರ್ಬತ್ತು ಇತ್ಯಾದಿ ಪಾನೀಯಗಳೂ—

ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುವು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಕಾರ್ಯೋತ್ಸಾಹೀ ವಿನೀತ ಸೇವಕರ ಏರ್ಪಾಡ ಇದೆ.

ಆಯಕ್ಕೆ ತಕ್ಕ ವ್ಯಯಮಾಡುವವರು, ವ್ಯಯಕ್ಕೆ ತಕ್ಕ ಆಯವನ್ನು ಹೊಂದಬೇಕಾದ ಅತ್ಯಾಧುನಿಕ ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ವಿರೀಕ್ಷಿಸಿದ—ನೀವು ಹೊಂದಲೇಬೇಕಾದ—

ಸಕಲ ಅನುಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ"ಪಾರ್ಟಿ—

"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—13 ಪ್ರೊಪ್ರೈಟರ್:—ನಾಣಯ್ಯ ರಾವ್, ಗಾಯತೊಂಡೆ.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.

ಕ್ವಿನಿನನ್ನು ಯಾವ ರೂಪದಲ್ಲಾ ಸೇರಿಸಿಲ್ಲ.

"ನವರತ್ನ ಅಲ್ಮಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನನ್ನು ಯಾವ ವಿಧದಲ್ಲಾ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದ ಸುಜೀವನ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲಿ ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರ್ 68, ಕೊಚಿನ್.

ಸ್ಪೋಕಿಸ್ಟ್—ಎ. ಎಸ್. ಮೂಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ. 52—40

ಏಜೆಂಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.

ನವರತ್ನ ಫಾರ್ಮಸಿ,

ಗ್ರಾಮೋದ್ಧಾರಕ್ಕಾಗಿ ಇಂಡಿಯಾ ಸರ್ಕಾರದ ಗ್ರಾಂಟು.

ಅಯ್ಯಾ,

ಇಂಪೀರಿಯಲ್ ಸರಕಾರದಿಂದ ಗ್ರಾಮೋದ್ಧಾರಕ್ಕಾಗಿ ಕೊಡಗಿಗೆ ದಯಪಾಲಿಸಲ್ಪಟ್ಟಿರುವ 50,000 ರೂಪಾಯಿಗಳ ವಿನಿಯೋಗವನ್ನು ತಿಳಿಯಿಕೊಳ್ಳಲು ತುಂಬಾ ಕುತೂಹಲಪಡುವೆನು. ಕೆಲವು ಮಂದಿ ಅಧಿಕಾರಿಗಳನ್ನು ಕೇಳಿದಾಗ ಅವರು ಒಡ ಗ್ರಾಮನಿವಾಸಿಗಳಿಗೆ ಕುಡಿಯುವ ನೀರಿನ ಮತ್ತು ವ್ಯವಸಾಯಕ್ಕೆ ಬೇಕಾದ ನೀರಿನ ವ್ಯವಸ್ಥೆಗಳನ್ನೂ ಅಲ್ಲದೆ ಆರೋಗ್ಯಕ್ಕೆ ಸಂಬಂಧಪಟ್ಟ ಮೂಪಾಡುಗಳನ್ನು ಮಾಡಲು ಹಣವನ್ನು ವಿನಿಯೋಗಿಸುವರೆಂದು ಹೇಳಿದರು. ಅದನ್ನು ನಾನು ಕಾರ್ಯತಃ ಪರೀಕ್ಷೆಮಾಡಿ ನೋಡುವಾಗ ಅದು ನಿಜವಲ್ಲವೆಂದು ತಿಳಿಯಿತು ಮೂನಾರ್ಡಿನ ಪೆಟಿಯು ಮಧ್ಯಭಾಗದಲ್ಲಿ ಒಂದು ಸರಕಾರಿ ಕೆರೆ ಇದೆ. ಅದರ ಸ್ಥಿತಿಯನ್ನು ವರ್ಣಿಸಲು ಅಸಾಧ್ಯ. ಅಷ್ಟು ಹೊಲಸಾಗಿದೆ. ಪೇಟೆಯವರ ಮಲಮೂತ್ರ ವಿಸರ್ಜನೆಯೆಲ್ಲಾ ಅದರಲ್ಲೇ ಶೇಖರವಾಗುತ್ತೆ. ಅದು ಅಲ್ಲದೆ ಸೊಳ್ಳೆಗಳ ತವರು ವನೆಯೇ ಅದು ಅಂದರೆ ತಪ್ಪಾಗದು. ನಾನು ಅದನ್ನು ಸಿವಿಲ್ ಸರ್ಜನರ, ಮಲೇರಿಯಾ ಆಫೀಸರು ಮತ್ತು ಸ್ಥಳೀಕ ಡಾಕ್ಟರುಗಳ ಅವಗಾಹನೆಗೆ ತಂದೆನು. ಅವರು ಈ ವಿಷಯವನ್ನು ಕಮಿಷನರು ಸಾಹೇಬರವರ ಅವಗಾಹನೆಗೆ ತರುತ್ತೇವೆಂದು ಹೇಳಿದರು. ಇದನ್ನು ಕಾರ್ಯತಃ ಜಾರಿಗೆ ತಂದರೋ ತಿಳಿಯದು. ಆದರೆ ಈಚೆಗೆ ಮೂನಾರ್ಡಿನ ನಿವಾಸಿಗಳೆಲ್ಲರೂ ರುಜುಮಾಡಿದ ಒಂದು ಅರ್ಜಿಯನ್ನು ಕಮಿಷನರು ಸಾಹೇಬರವರಿಗೆ ಕಳುಹಿಸಲಾಯಿತು. ಅದಕ್ಕೆ ಕಮಿಷನರು ಸಾಹೇಬರು ಕಳುಹಿಸಿರುವ ಎಂಡಾರ್ಸ್‌ಮೆಂಟನ್ನು ನೋಡಿದರೆ ಶೋಚನೀಯ. ಈಗ ಸರಕಾರದಲ್ಲಿ ಹಣವಿಲ್ಲವಂತೆ ಮೂನಾರ್ಡಿನ ನಿವಾಸಿಗಳು 250 ರೂ. ಗಳನ್ನು ಚಂದಾ ಶೇಖರಿಸಿದರೆ ತಾವು 250 ರೂ. ಗಳನ್ನು ಕೊಡುವುದಾಗಿ ಹೇಳಿರುವುದು ನೋಡಿದರೆ ಇಂಪೀರಿಯಲ್ ಸರಕಾರದವರು ಗ್ರಾಮೋದ್ಧಾರಕ್ಕಾಗಿ ದಯಪಾಲಿಸಿರುವ ಹಣವು ನಮ್ಮ ಮೂನಾರ್ಡಿನವರ ಪ್ರಯೋಜನಕ್ಕೆ ಇಲ್ಲವೆಂದೇ ಹೇಳಬೇಕಾಗಿದೆ. ಪ್ರಪಂಚದ ಎಲ್ಲಾ ಭಾಗವು ಆರ್ಥಿಕ ದುರ್ದಶೆಗೀಡಾಗಿರುವಾಗ ಒಡ ಜನರಾದ ಮೂನಾರ್ಡಿನವರು ಮೂತ್ರ ಯಾವ ರೀತಿ ಹಣ ಶೇಖರಿಸುವ ಬಗೆ ಹೇಗೆ? ಮೂನಾರ್ಡಿನಲ್ಲಿ 250 ರೂ. ಗಳನ್ನು ಒಬ್ಬರೇ ಕೊಡಲು ಶಕ್ತರಾದವರು ಅನೇಕ ಮಂದಿ ಇರಬಹುದು ಆದರೆ ಅಂಥ ಸಾರ್ವಜನಿಕ ಕಾರ್ಯಕ್ಕೆ ಮುಂದೆ ಬರುವಷ್ಟು ಯೋಗ್ಯತೆಯನ್ನು ಅವರನ್ನು ಪಡೆಯಲಿಲ್ಲವೆಂದರೆ ಅತಿಶಯೋಕ್ತಿಯೋಗದು. ಇಂಥಾ ಮಹನೀಯರ ಪೈಕಿ ಒಬ್ಬರು ವ್ಯಕ್ತಿದ್ವೇಶವನ್ನು ಇಟ್ಟುಕೊಂಡು ಆ ಕೆರೆಯ ಅವಶ್ಯಕತೆಯೇ ಇಲ್ಲ ಅದನ್ನು ಮುಚ್ಚಿಸುವುದು ಒಳ್ಳೆಯದು ಎಂದು ಅಭಿಪ್ರಾಯಪಟ್ಟಿರುತ್ತಾರಂತೆ ಇದು ಸ್ವಾರ್ಥಪರತೆಯ ಆಲೋಚನೆ. ಬೇಸಿಗೆ ತಿಂಗಳುಗಳಲ್ಲಿ ಇಲ್ಲಿಯ ನಿವಾಸಿಗಳಿಗೆ ಕುಡಿಯಲು ನೀರಿಗೆ ಅಭಾವವಾಗುತ್ತೆ. ದನ ಕರುಗಳ ಗೋಳಂತೂ ಹೇಳತೀರದು. ಮಲೇರಿಯಾ ಅಧಿಕಾರಿಗಳು ಒಂದೆರಡು ಸಲ ಸೊಳ್ಳೆಗಳಿಗೆ ಎಂಣೆ ಹಾಕಿಸಿರೂ ಸೊಳ್ಳೆಗಳ ಆವಾಂತರವು ಹೆಚ್ಚುತ್ತಲೇ ಇದೆ. ಅದರಲ್ಲೂ ಆ ಕೆರೆ ಎದುರುಗಡೆ ಇರುವ ನಿವಾಸಿಗಳು ವರ್ಷದಲ್ಲಿ ಎಷ್ಟು ಮಲೇರಿಯಾ ಪೀಡಿತರಾಗಿರುವರೆಂದು ಸ್ಥಳೀಕ ಡಾಕ್ಟರನ್ನ ಕೇಳಿದರೆ ವೇದ್ಯವಾಗುತ್ತೆ. ಗ್ರಾಮೋದ್ಧಾರ ಕಾರ್ಯವನ್ನು ಮಾಡಲು ಬದ್ಧ ಕಂಕಣರಾದ ಘನ ಸರಕಾರದವರು ಒಡ ನಿವಾಸಿಗಳಾದ ಮೂನಾರ್ಡಿನವರ ಗೋಳನ್ನು ಚಿತ್ತಕ್ಕೆ ತಂದುಕೊಂಡು ಈ ಕೆರೆಯನ್ನು ದುರಸ್ತು ಮಾಡಿಸಿಕೊಡಬೇಕಾಗಿ ಪ್ರಾರ್ಥಿಸುವ.

ಮೂನಾರ್ಡಿನ ನಿವಾಸಿಗಳಲ್ಲೊಬ್ಬ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ಗಿರಿಯವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೈಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಎನಂಡ ಮೂಡಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಜಿ. ಮೂಪಯ್ಯನವರು
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೂಚಯ್ಯನವರು,
ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು
ನಾಪೋಕ್ಲು—ಮೆ, ಬೆಳ್ಳಿಪಂಡ ಯಂ, ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್.
ಮಡಿಕೇರಿ.

ಕೊಡಗು ಸೆಂಟ್ರಲ್ ಬ್ಯಾಂಕ್ ವಿಂಟಿಂಗ್.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ವಿಂಟಿಂಗು ಈ ತಾರೀಕು 24—2—1936 ರಲ್ಲು ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. ಮೆ. ಗಳಾದ (1) ಪಂದ್ಯಂಡ ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು) (2) ಯಂ. ಯಂ. ಬೆಳ್ಯಪ್ಪನವರು (ಗೌರವ ಕಾರ್ಯದರ್ಶಿಯವರು) (3) ರಾ. ಸಾ. ಪಾಂಡಂಡ ಚಂಗಪ್ಪನವರು (ಟ್ರೆಜರರ್) (4) ಐಸಂಡ ಕಾರ್ಯಪ್ಪನವರು (5) ಕೊಳ್ಳಿಮಾಡ ಕರುಂಬೈಯ್ಯನವರು (6) ಪಿ ಜಿ. ಮುದ್ದಯ್ಯನವರು (7) ಕಂಬೀರಂಡ ಬೆಳ್ಯಪ್ಪನವರು (8) ಐಚೆಟ್ಟಿರ ಸಬ್ಬಯ್ಯನವರು (9) ಬಲ್ಲಚಂಡ ಬೆಳ್ಯಪ್ಪನವರು (10) ಉದಿಯಂಡ ಮೂಚಯ್ಯನವರು (11) ಪಾಲೇಕಂಡ ತಮ್ಮಯ್ಯನವರು (12) ನಡಿಕೇರಿಯಂಡ ಸೋಮಯ್ಯನವರು ಮತ್ತು (13) ಒಡಿಯಂಡ ಗಣಪತ್ತಿಯವರು.

ಈ ಕೆಳಗಿನ ಡೈರೆಕ್ಟರುಗಳು ಗೈರು ಹಾಜರಾದಿದ್ದರು. ಮೆ. ಗಳಾದ (1) ಕೆ. ಯಂ. ಬೆಳ್ಯಪ್ಪನವರು ಮತ್ತು (2) ಜಮ್ಮಾಡ ಮೂದಪ್ಪನವರು.

ಕೋಆಪರೇಟಿವ್ ಸಂಘಗಳ ರಿಜಿಸ್ಟ್ರಾರರೂ ಸಹ ಹಾಜರಿದ್ದರು.

1. ಕಳೆದ ವಿಂಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2 ಸುಪರ್ ವಿಜನ್ ಬೋರ್ಡಿನ ಕಳೆದ ವಿಂಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

3. ಕಳೆದ ಜನವರಿ ತಿಂಗಳ ಜಮಾ ಮತ್ತು ಖರ್ಚಿನ ಲೆಖ್ಖ ಓದಿ ಮಂಜೂರ್ಮಾಡಲಾಯಿತು.

ಹಿಂದಳ ತಿಂಗಳ ಸಿಲ್ಕು	ರೂ	33,812	1 1
ಸದರಿ ತಿಂಗಳಲ್ಲು ವಸೂಲಾತಿ		7,172	12 0
	ಜುಮ್ಲ	40,984	13 1
ಸದರಿ ತಿಂಗಳಲ್ಲು ಖರ್ಚು - .		7582	1 0
ಬಾಕಿ ಸಿಲ್ಕು ರೂ		33,402	12 1

4 ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು (1) ಕಣಿವೆ ನಲ್ಲೂರು ಸೊಸೈಟಿಗೆ ರೂ. 500 (2) ಮಕ್ಕಂದೂರು ಸೊಸೈಟಿಗೆ ರೂ. 3000 (3) ಕಿಗ್ಗಟ್ಟುನಾಡು ಕ್ರಾಪ್, ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 5000 (4) ಗೋಪಾಲಪುರ ಸೊಸೈಟಿಗೆ ರೂ. 1000 (5) ಮುಳ್ಳೂರು ಸೊಸೈಟಿಗೆ ರೂ. 250 (6) ಅತ್ತೂರು ಸೊಸೈಟಿಗೆ ರೂ 1200 (7) ತಿತಿಮತಿ ಶ್ರೀರಾಮ ಸೊಸೈಟಿಗೆ ರೂ. 1800 (8) ಗೋಣಿಕೊಪ್ಪಲು ಟೌನ್ ಸೊಸೈಟಿಗೆ ರೂ. 2000 (9) ಕೊಡಗು ಉಪಾಧ್ಯಾಯರ ಸಹಕಾರಿ ಸ್ಟೋರ್ಸಿಗೆ ರೂ. 1000 (10) ಅಮ್ಮತ್ತಿ ಕ್ರಾಪ್, ಲೋನ್ ಅಂಡ್ ಸೇಲ್ ಸೊಸೈಟಿಗೆ ರೂ. 3000 (11) ವೀರಾಜಪೇಟೆ ಕ್ರಾಪ್ ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 3000 (12) ದಕ್ಷಿಣ ಕೊಡಗು ಸಹಕಾರಿ ಸ್ಟೋರ್ಸಿಗೆ ರೂ. 1000 (13) ಮೂನಾರ್ಡಿನ ಸ್ಟೋರಿಗೆ ರೂ. 500 ಮತ್ತು (14) ಕರಣಂಗೇರಿ ಸೊಸೈಟಿಗೆ ರೂ. 325.

5. ಈ ಕೆಳಗಿನ ಸೊಸೈಟಿಗಳ ವಸೂಲಾತಿಯು ಶೇಕಡ 50 ರಷ್ಟು ಆದರೆ ಮಾತ್ರ ಅವುಗಳ ಸಾಲದ ಅರ್ಜಿಗಳನ್ನು ಬರುವ ವಿಂಟಿಂಗಿನಲ್ಲಿ ಆಲೋಚಿಸಬಹುದೆಂತಲೂ ಆ ವರೆಗೆ ಅವರ ಡಿವೊಂಡ್ ಕಲೆಕ್ಷನ್, ಬ್ಯಾಲೆನ್ಸ್ ಸ್ಟೇಟ್‌ಮೆಂಟ್ ಸಹ ತರಿಸಬೇಕೆಂತಲೂ ತೀರ್ಮಾನವಾಯಿತು. (1) ಕೋಪಟ್ಟಿ ಸೊಸೈಟಿ (2) ಮುತ್ತುನಾಡು ಸೊಸೈಟಿ ಮತ್ತು (3) ಕಾಂಡನಕೊಲ್ಲಿ ಸೊಸೈಟಿ.

6 ತೆಕ್ಕಡ ಕುಟುಂಬ ಸಂಘದವರ ಅರ್ಜಿಯನ್ನು ಕಾರಣಾಂತರದಿಂದ ತಿರಸ್ಕರಿಸಲಾಯಿತು ಮತ್ತು ಮರನಾಡು ಸಂಘದ ಸಾಲದ ಅರ್ಜಿಯನ್ನು ಬರುವ ಏಪ್ರಿಲ್ ತಿಂಗಳಲ್ಲಿ ಆಲೋಚಿಸುವಂತೆ ತೀರ್ಮಾನಿಸಲಾಯಿತು.

7. ಸೆಂಟ್ರಲ್ ಬ್ಯಾಂಕಿನ ಸಿಬ್ಬಂದಿಗಳ ಕಾನ್‌ಫರೆನ್ಸ್ ಪ್ರೊಸೀಡಿಂಗ್ಸನ್ನು ಓದಲಾಗಿ ಸದರಿ ಕಾನ್‌ಫರೆನ್ಸಿನ ಪ್ರೊಸೀಡಿಂಗ್ಸ್ ನಕಲನ್ನು ಎಲ್ಲಾ ಡೈರೆಕ್ಟರುಗಳಿಗೆ ಕಳುಹಿಸುವಂತೆ ತೀರ್ಮಾನಿಸಲಾಯಿತು.

8. ಮರನಾಡು ಸಂಘದ ಮೆಂಬರು ಮೆ. ಚೆಪ್ಪೀರ ಕಾರ್ಯಪ್ಪನವರ ವಾಂಗ್ಮೂಲದ ಮೇರೆ ಶ್ರೀಮತಿ ಕಳ್ಳೇಂಗಳ ಮುದ್ದವ್ವನವರ ಜಮ್ಮಾದ ಭೂಮಿಯನ್ನು ಹರಾಜು ಮಾಡಿದ್ದನ್ನು ರದ್ದು ಪಡಿಸಬೇಕೆಂಬ ವಿಷಯ ಶ್ರೀಮಂಗನಾಡು ಯೂನಿಯನ್ನಿನ ಪೈಸಿಡೆಂಟರು ರಿಪೋರ್ಟು ಬರಕೊಂಡ ಮೇರೆ—ಸದರಿ ಸೊಸೈಟಿಯ ಪೈಸಿಡೆಂಟರು ತಪ್ಪಿತಸ್ಥರೆಂದು ತಿಳಿದು ಬಂದದರಿಂದ ಅವರು ಇನ್ನು ಮುಂದಕ್ಕೆ ಇಂಥಾ ತಪ್ಪು ಮಾಡಬಾರದೆಂದು ಅವರನ್ನು ಎಚ್ಚರಿಸುವಂತೆ ತೀರ್ಮಾನಿಸಲಾಯಿತು.

9. ವಿಂಟಿಂಗು ಪ್ರೊಸೀಡಿಂಗ್ಸ್ ವಗೈರೆಗಳನ್ನು ನಾನ್ ಕ್ರೆಡಿಟ್ ಸೀನಿಯರ್ ಇನ್ಸ್‌ಪೆಕ್ಟರರ ಮೂಲಕ ತನಗೆ ಕಳುಹಿಸಬೇಕೆಂದು ರಿಜಿಸ್ಟ್ರಾರಂವರು ತಾರೀಕು 20—11—35 ರಲ್ಲು ಕಳುಹಿಸಿದ ನಂಬ್ರ 691 ರ ಪತ್ರವನ್ನು ಓದಲಾಗಿ ಸದರಿ ಬಾಬಿನಲ್ಲಿ ಡೈರೆಕ್ಟರುಗಳು ಈ ಮೊದಲೇ ಮಾಡಿದ ತೀರ್ಮಾನವನ್ನು ಬದಲಾಯಿಸಲಿಕ್ಕೆ ಹೊಸ ಸಬಬುಗಳೇನೂ ಇಲ್ಲವೆಂದು ತೀರ್ಮಾನಿಸಲಾಯಿತು.

10. ಬ್ಯಾಂಕಿನ ಆಫೀಸು ಸಿಬ್ಬಂದಿಗಳು ತಮ್ಮ ದಿನಚರ್ಯೆ ಕೆಲಸ ಕಾರ್ಯಗಳ ಸಮಯವನ್ನು ಬದಲಾಯಿಸಿ ಕೊಡಬೇಕೆಂದು ಕೇಳಿಕೊಂಡ ಅರ್ಜಿ ಓದಲಾಯಿತು.

ಈಗ ಜಾರಿಯಲ್ಲಿರುವ ಪ್ರಕಾರ ಅವರ ಕೆಲಸ ಕಾರ್ಯಗಳ ಸಮಯವು ಬೆಳಿಗ್ಗೆ 9 ಗಂಟೆಯಿಂದ 12 ಗಂಟೆ ರು ವರೆಗೂ ಅನಂತರ 2 ಗಂಟೆಯಿಂದ ಸಾಯಂಕಾಲ 5 ಗಂಟೆಯ ವರೆಗೂ ಮತ್ತು ವಿಂಟಿಂಗು ದಿವಸಗಳಲ್ಲದ ಶನಿವಾರಗಳಲ್ಲಿ ಮಾತ್ರ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆಯ ವರೆಗೂ ಇರಬಹುದೆಂದು ತೀರ್ಮಾನಿಸಲಾಯಿತು.

11. ಬ್ಯಾಂಕಿನ ಕಾಮನ್ ಗುಂಡ್ ಫಂಡಿನಿಂದ ತನ್ನ ಓದುಗಾರಿಕೆಗೆ ಧನ ಸಹಾಯ ಮಾಡಬೇಕೆಂದು ವೆ. ಉಳ್ಳಿಯಡ ದೇವಯ್ಯನವರು ಒಕ್ಕೊಂಡ ಸಾಲದ ಅರ್ಜಿಯನ್ನು ತಿರಸ್ಕರಿಸಲಾಯಿತು.

12. ಬೊಳಿಬಾರು ಸೊಸೈಟಿಯ ಕಮಿಟಿ ಮೆಂಬರುಗಳು ತಮಗೆ ಬ್ಯಾಂಕಿನಿಂದ ಮಂಜೂರ್ಮಾಡಿದ ಹಳೇ ಸಾಲಗಳಿಗೆ ಅಲ್ಲಾ ಬಡ್ಡಿಯ ದರವನ್ನು ಇಳಿಸಬೇಕೆಂತಲೂ, ಹೆಚ್ಚಿನ ಕಂತುಗಳನ್ನು ಕೊಡಿಸಿಕೊಡಬೇಕೆಂತಲೂ ಬಂಕೊಂಡ ಅರ್ಜಿಯನ್ನು ಓದಲಾಯಿತು.

ಸಾಲಗಳ ಮೇಲೆ ವಸೂಲ್ಮಾಡುವ ಬಡ್ಡಿಯ ದರವನ್ನು ಡೈರೆಕ್ಟರುಗಳು ಈ ಮೊದಲೇ ಕಮ್ಮಿ ಮಾಡಿರುವುದರಿಂದ ಸದರಿ ವಿಷಯ ಎಲ್ಲಾ ಸೊಸೈಟಿಗಳಿಗೂ ಸರ್ಕ್ಯುಲರ್ ಕಳುಹಿಸುವಂತೆ ತೀರ್ಮಾನಿಸಲಾಯಿತು.

13 ಕರಿಯಂದತ್ತ ಸೊಸೈಟಿಯವರು ಕಂತು ಹೆಚ್ಚಿಸಿಕೊಡಬೇಕೆಂದು ಪ್ರೊಸೀಡಿಂಗ್ಸ್ ಮಾಡಿದ್ದರ ಮೇರೆ ಕಡಿಮತ್ತು ನಾಡು ಯೂನಿಯನ್ ಪೈಸಿಡೆಂಟರು ಬರಕೊಂಡ ರಿಪೋರ್ಟನ್ನು ಓದಲಾಗಿ, ಸದರಿ ಸೊಸೈಟಿಯವರು ಈ ವಿಷಯದಲ್ಲಿ ತಮ್ಮ ಹಾಲ್ ಹವಾಲ್ ಕುರಿತು ಅಲಾಯಿದ ರಿಪೋರ್ಟನ್ನು ಕಳುಹಿಸುವಂತೆಯೂ ಈ ಸಮ್ಮಂಧ ಎಲ್ಲಾ ಸೊಸೈಟಿಗಳಿಗೆ ಸರ್ಕ್ಯುಲರನ್ನು ಕಳುಹಿಸುವಂತೆಯೂ ತೀರ್ಮಾನಿಸಲಾಯಿತು.

14. ಚೇಂದಂಡ ಕುಟುಂಬ ಸಂಘದವರು ತಾವು ಬ್ಯಾಂಕಿಗೆ ಮುಖಪಾವತಿ ಮಾಡಬೇಕಾದ ಸಾಲಗಳಿಗೆ ಹೆಚ್ಚು ಕಂತುಗಳನ್ನು ಕೊಡಿಸಿಕೊಡಬೇಕೆಂದು ಕೋಆಪರೇಟಿವ್ ಇನ್ಸ್‌ಪೆಕ್ಟರರ ಮತ್ತು ಎಡೆನಾಲ್ಕನಾಡು ಯೂನಿಯನ್ ಪೈಸಿಡೆಂಟರ ರಿಪೋರ್ಟುಗಳೊಡನೆ ಬ್ಯಾಂಕಿಗೆ ಕಳುಹಿಸಿದ ಪತ್ರವನ್ನು ಓದಲಾಗಿ ಅದನ್ನು ತಿರಸ್ಕರಿಸಲಾಯಿತು.

15. ಬ್ಯಾಂಕಿನಲ್ಲಿ ಕರೆಂಟ್ ಎಕೌಂಟ್ ತೆರೆಯುವ ಸಮ್ಮಂಧ ಗವರ್ನ್‌ಮೆಂಟಿನಿಂದ ಬಂದ ಪತ್ರವನ್ನು ಓದಲಾಯಿತು.

ಈ ವಿಷಯದಲ್ಲಿ ಇಂಪೀರ್ಯಲ್ ಬ್ಯಾಂಕಿನ ಶಾಖೆಯು ಕೊಡಗಿನಲ್ಲಿ ಇಲ್ಲದ ಕಾರಣ ಬ್ಯಾಂಕಿನ ಚಾಲಿ, ವೈವಾಟುಗಳಿಗೆ ಅನುಗುಣವಾಗುವುದಿಲ್ಲವೆಂದು ಚೀಫ್ ಕಮಿಷನರವರಿಗೆ ತಿಳಿಸುವಂತೆಯೂ, ಸದರಿಯವರು ಇಂಡಿಯಾ ಗವರ್ನ್‌ಮೆಂಟಿನವರು ಮಾಡಿರುವ ಆರ್ಡರನ್ನು ಪುನರಾಲೋಚಿಸುವಂತೆ ಓದಿ ಕಳುಹಿಸಬೇಕೆಂದೂ ಚೀಫ್ ಕಮಿಷನರವರನ್ನು ಕೇಳಿಕೊಳ್ಳುವ ಹಾಗೆ ತೀರ್ಮಾನಿಸಲಾಯಿತು.

16. ವೀರಾಜಪೇಟೆ ಟೌನ್ ಸೊಸೈಟಿಯ ಕೆಲಸ ಕಾರ್ಯಗಳ ವಿಷಯ ಬ್ಯಾಂಕಿನ ಸುಪರ್‌ವಿಜನ್ ಬೋರ್ಡಿನವರು ಬರೆದು ಕಳುಹಿಸಿದ ರಿಪೋರ್ಟನ್ನು ಓದಿ ರಿಕಾರ್ಡು ಮಾಡಲಾಯಿತು.

17. ವಾಯಿದೆ ವಿಂದ ಬಾಕಿದಾರರಾಗಿರುವ ಸೊಸೈಟಿಗಳಿಗೂ ಕೂಡ ಬಡ್ಡಿಯ ದರವನ್ನು ಕಮ್ಮಿಮಾಡಬೇಕೆಂಬ ವಿಷಯ ಅಮ್ಮತ್ತಿನಾಡು ಯೂನಿಯನ್ನಿನವರ ಪ್ರೊಸೀಡಿಂಗ್ಸನ್ನು ಓದಲಾಗಿ ಸದರಿ ವಿಷಯ ಮೊದಲೇ ತೀರ್ಮಾನಿಸಿರುವದರಿಂದ ಹೆಚ್ಚಿಗೆ ಆಲೋಚಿಸಲಿಲ್ಲ.

18 ಬ್ಯಾಂಕಿನ ಮೆಂಬರುಗಳಾಗಲು ತಿತಿಮತಿ ಶ್ರೀರಾಮ ಸೊಸೈಟಿ ಮತ್ತು ಮೆ. ಚೇರಂಡ ಎಸ್. ಮಂದಣ್ಣನವರು ಅರ್ಜಿ ಬರಕೊಂಡ ಮೇರೆ ಅವರನ್ನು ಮೆಂಬರುಗಳಾಗಿ ಆರಿಸಿಕೊಳ್ಳಲಾಯಿತು.

19. ತಾರೀಕು 6—12—35 ರಲ್ಲು ಮಂಜೂರಾದ ರೂ 200 ಕ್ಕೆ ಮುಖಪಾವತಿ ಮಾಡಲು ಕೊಟ್ಟಿರುವ ಕಂತುಗಳನ್ನು ಮೂರ್ತಿ ತಿಂಗಳಲ್ಲು ಪಾವತಿ ಮಾಡಲು ಆಗ ಭಕ್ತಕ್ಕೆ ಬೆಲೆ ಇಲ್ಲದ್ದರಿಂದ ಡಿಸೆಂಬರು ತಿಂಗಳಿಗೆ ಮುಂದರಿಸಿಕೊಡಬೇಕೆಂದ ನೆರವಂಡ ಕುಟುಂಬ ಧನನ ಭಂಡಾರವು ಬರಕೊಂಡ ಅರ್ಜಿ ಮೇರೆ ಅವರ ಕೋರಿಕೆಯನ್ನು ನೆರವೇರಿಸುವಂತೆ ತೀರ್ಮಾನಿಲಾಯಿತು.

20 ಒಬ್ಬ ಮಹನೀಯಳು ಐತಾತಾದ ತನ್ನ ಗಂಡನ ಸರನಲ್ಲಿ ಬ್ಯಾಂಕಿನಲ್ಲಿರುವ ಡಿಪಾಜಿಟ್ಟು ಮೊಬಲಗುಗಳನ್ನ ತನ್ನ ಹೆಸರಿಗೆ ವರ್ಗಾಯಿಸಿಕೊಡಬೇಕೆಂದು ಅರ್ಜಿ ಬರಕೊಂಡ ಮೇರೆ ಖಾನೂನು ಹೇಗಿದೆಯೆಂದು ವಿಚಾರಿಸಿ ತದನಂತರ ವರ್ಗಾಯಿಸಲು ಏರ್ಪಾಡು ಮಾಡಲಾದೀತೆಂತ ತೀರ್ಮಾನಿಲಾಯಿತು

ಪಿ. ಐ. ಬೆಳ್ಯಪ್ಪ,
(ಅಧ್ಯಕ್ಷರು.)

ಡಾಕ್ಟರ್ ಮೇತ್ಯುಸ್ ಎಬ್ರಹಾಮ್.

ದಂತ ವೈದ್ಯರು.

ಗೀತಾಂಜಲಿ ಬಂಗ್ಲೆ.

(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವದಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲು ತಿಳಿಯುವುದು. [52—21]

---

೪೦ ವರ್ಷಗಳಿಂದ ಅನುಭವದಲು ಪ್ರಖ್ಯಾತಿ ಹೊಂದಿದ

ಕರ್ಕಕಂಪೌಂಡ್

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಒರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಪಿ. ಓ ಆಸೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರು ಕರ್ಕೆ,

(25—23) ಮುಖ್ಯ ಕಂಪೆನಿ,

ಗಿರಗಾಂವ, ಮುಂಬಯಿ.

SHIKOMANI NARAYANACHARYA

Choukhamba Benares City.

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಡ್ಡೆ ಪ್ರವೂಣದ ಕಂಠಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ 10ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 40ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ವಿಶ್ರಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯರ್,

52—28 ಚೌಖಂಬಾ ಬೆನಾರಸ್, (ಕಾಶೀ)

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉದ್ದೇಶನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮವಾಗಿ ಕೈಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾಖಲಾ ಫಾರಮುಗಳೂ, ಖರೀದಿ ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರೀದಿ ಫಾರಮುಗಳೂ, ಸೆಕ್ಷೀರ್ ಕೀಪರ್ ಖರೀದಿ ಫಾರಮುಗಳೂ ಮೀವಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ಲೆಜ್ಜರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಪುಸ್ತಕ ಒಂದಕ್ಕೆ ೮ ಆಣೆಗಿದ್ದವರು ಆಡರ್ ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್

"ಕೊಡಗು, ಲಿಮಿಟೆಡ್",

ಮಡಿಕ್ಕೇರಿ.

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತಿ ಉಪಯುಕ್ತ ಸೂಚನೆಗಳಿವೆ.



Goolamhusain Allibhoy & Sons, Ltd.,

26—23 210, Abdulrehman Street, BOMBAY 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್:

ಅಧ್ಯಕ್ಷರು—ಮಾನನೀಯ ಸರ್ ಲಲ್ಲಭಾಯಿ ಶಾನುಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಚ್ಚಿಕಾರ್ ಬ್ರುದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲು ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನಪೂರ್ತಿ ನಂಬಿರಿ.

ಪತಿ ವಕ್ಷಿಯರು ಮತ್ತು ವ್ಯಾಪಾರಸ್ಥರು ವಗೈರೆಯರಿಗೆ ವಿಶೇಷವಿದೆ (ಜಾಯಿಂಟ್ ಲೈಫ್)

ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.

ಪಾಲಿಸಿದಾರರು ಅಕಾಸಾತ್ ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ವೊಬಲಗನ್ನು ಮುಂದಿನ ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಶನ್ ರೀತಿಯಲ್ಲು ಉದಾರತ್ವದಿಂದ ಕೊಡಲು ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ.

ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ ಉತ್ತಮ ತಾರೀಕಿನ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—ಬಿ. ಎಸ್. ಐಯ್ಯಪ್ಪ,
ಕೊಡಗು ಚೀಫ್ ಏಜೆಂಟ್,
26ಕ್ಕೆ—14 ಮಹದೇವಪೇಟೆ, ಮಡಿಕೇರಿ.

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."

ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸಂರಕ್ಷಣೆಯನ್ನೂ ಮಾಡುತ್ತದೆ, ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿಡುವರೋ ಯಾರು ಯಾರು ತಮ್ಮ ಚರ್ಮವನ್ನು ಎಚ್ಚರಿಕೆಯಿಂದ ನೋಡುವರೋ ಅವರೆಲ್ಲರೂ ಉಪಯೋಗಿಸುವುದು ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲಿ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—54 ಬೆಂಗಳೂರು

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ವೊಬಲಗು	—	37,180— 0—0
ಜಮೂಬಂದ ಠೇವಣಾತಿ	—	25,9035—8—10
ವಸೂಲಾದ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಪಂದ್ಯಂಡ ಐ. ಬೆಳ್ಯಪ್ಪನವರು.

ಟ್ರೆಜರರ್ ರಾ. ಸಾ. ಪಾಂಡಂಡ ಜಂಗಪ್ಪನವರು,

ಸೆಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಖು 1—2—1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ಸರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಆಗಿಂದಾಗ್ಗೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವುದಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಟರ್ಸ್—
ಕೆ. ಟಿ. ಡೋಂಗರೆ ಕಂಪೆನಿ,
(52—2) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1935 Rs.	1925 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:—
Empire of India Life Building,
BOMBAY.

52—16

Branch Office:—
152/3—Commercial Street,
BANGALORE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪಾಶ್ಚಿಕ ವನಸ್ಪತಿಗಳಿಂದ ತಯಾರಿಸಲ್ಪಡುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಪುಕ್ಕು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ಧೃಷ್ಟಿಮೃತ

ಈ ವನಸ್ಪತಿ ರಸಾಕರ್ಷಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಗಳಿಂದ ತಯಾರಿಸಿದ ಮಧುರಾಸವ ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣೊಳಗೆ ಉರಿ, ಮೂಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಷ್ಟಾಸಕ್ತನಿದ್ದಲ್ಲ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ದೋಷಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇತರ ಗುಣ ಕಂಡು ಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4 0, 3 ಬಾಟ್ಲಿಗೆ ರೂ 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಸ್ಪೋಸ್ಸ್ ನಿರ್ವಾಣ ಜಿಲ್ಲಾ (ಬೆಳಗಾವ್.)

52—27 ಕೊಡಗಿನ ಏಜಂಟರು:—ನಾವೆಲ್ಲಿ ಸ್ಟೋರ್ಸ್, ಮಡಿಕೇರಿ
ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ
ಭಕ್ತಾ ಬ್ರದರ್ಸ್, ಶಾಪರಗೋಡು.] ಎ ಎನ್. ಹುಚ್ಚಯ್ಯ, ವಕೀಲರು, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(೧೯೭೫ರಲ್ಲಿ ಇಂಡಿಯಾದಲ್ಲಿ ಸ್ಥಾಪಿಸಲ್ಪಟ್ಟದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಯಿಮ್ಸ್‌ಗಾಗಿ ಕೊಟ್ಟ ಒಟ್ಟು ಹಣ	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನ
ಅಹ್ಮದಾಬಾದು	ಕಲ್ಕತ್ತಾ	ಕೊಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನ	ಸಿಂಗಪುರ
ಅಲ್ಲಾಹಾಬಾದು	ಢಕ್ಕಾ	ಲಕ್ನೌ	ಪೂನ	ಸುಕ್ಕೂರು
ಅಂಬಾಲಾ	ದೆಲ್ಲಿ	ಮದ್ರಾಸು	ರಾಯಿಪುರ	ತಿರುಚಿನಾಪಳ್ಳಿ
ಬಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇರೇಡ್, ಬೆಂಗಳೂರು,

52—9

ಯಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)

Printed & published by P. I. Belliappa at 'Kodagu' Press, Mercara for "Kodagu" Ltd.